The motion was adopted

Clauses 2 and 3

MR. DEPUTY SPEAKER :—We will now take up consideration of the Bill clause by clause. The question is :

"That Clauses 2 and 3 do stand part of the Bill.

The motion was adopted

Clauses 2 and 3 were added to the Bill.

Clause

MR. DEPUTY SPEAKER :—I will now put Clause 1 Etc.-Title Etc. to the vote of the House.

The question is :

"That Clause 1 the long Title, the Preamble and the Enacting formule do stand part of the Bill."

The motion was adopted

Clause 1, the Long Title, the Preamble and the Enacting formule were added to the Bill.

Motion to Pass

SRI M. Y. GEORPADE :—I beg to move.

"That The Mysore Contingency Fund (Amendment) Bill, 1972 be passed."

MR. DEPUTY SPEAKER :—I will now put the motion to the vote of the House. The question is :

"That The Mysore Contingency Fund (Amendment) Bill, 1972, be passed."

The motion was adopted and the Bill was passed

OFFICIAL RESOLUTION :

re : Parliament to legislation the imposition of ceiling on urban immovable Property etc in the State

MR. DEPUTY SPEAKER :—Now, we come to the next item viz., Official Resolution by the Hon. Minister for Revenue,

SRI N. HUTCHMASTHY GOWDA (Minister for Revenue) I beg to move :—

"Whereas imposition of ceiling on urban immovable property and the acquisition of such property in ex-cess of the ceiling limit with a view to utilising such excess for public purposes is a matter of general importance and the problems relating thereto are common to all the States ;

And whereas legislation for the purpose mentioned above is relatable to matters enumerated in Entry 18 of List II of the Seventh Schedule to the Constitution of India with respect to which Parliament has no power to make a law for the States except as provided in articles 249 and 250 thereof :

And whereas for the purpose of securing uniformity in legislation, it is desirable that such legislation should be undertaken by Parliament :

Now, therefore, in pursuance of clause (1) of article 252 of the Constitution of India, this Assembly hereby resolves that the imposition of ceiling on urban immovable property and acquisition of such property in excess of the ceiling limit with a view to utilising such excess for public purposes and all other matters connected there-with or incidental thereto shall be regulated in this State by Parliament by law."

MR. DEPUTY SPEAKER :—Motion moved.

"Whereas imposition of ceiling on urban immovable pro-perty and the acquisition of such property in excess of the ceiling limit with a view to utilising such excess for public purpose is a matter of general importance and the problems relating thereto are common to all the States;

And whereas legislation for the purpose mentioned above is relatable to matters enumerated in Entry 18 of list II of the Seventh Schedule to the Constitution of India with respect to which Parliament has no power to make a law for the States except as provided in articles 249 and 250 thereof ;

And whereas for the purpose of securing uniformity in legislation, it is desirable that such legislation should be undertaken by Parliament.

(DEPUTY SPEAKER)

Now, therefore, in pursuance of clause (1) of article 252 of the Constitution of India, this Assembly hereby resolves that the imposition of ceiling on urban immovable property and acquisition of such property in excess of the ceiling limit with a view to utilising such excess for public purposes and all other matters connected therewith or incidental thereto shall be regulated in this State by Parliament by law.''

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈ ನಿರ್ಣಯ ಸೆಲ್ಫ್ ಎಕ್ಸ್‌ಪ್ಲನೇಟರಿಯಾಗಿದೆ. ಇದರ ಮೇಲೆ ಭಾಷಣ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :—ನಾವು ಒಪ್ಪಿಗೆ ಕೊಡದಿದ್ದರೂ ನೀವು ಅದನ್ನು ಪಾಸ ಮಾಡಿಸುತ್ತೀರಿ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) :—ಮಾನ್ಯ ಉಪಸಭಾಧ್ಯಕ್ಷರೇ, ಈಗ ಮೈಸೂರು ರಾಜ್ಯದ ರಾಜಸ್ವ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಸರ್ಕಾರಿ ನಿರ್ಣಯದ ಬಗ್ಗೆ ಚರ್ಚೆಯಿಲ್ಲದೆ ಒಪ್ಪುಕೊಳ್ಳುವುದಕ್ಕಾಗುವುದಿಲ್ಲ. ಕಾರಣಗಳು ಇವೆ. ಮಾನ್ಯ ಮಂತ್ರಿಗಳು ಇವತ್ತು ನಮ್ಮ ಮುಂದೆ ಏನು ನಗರ ಆಸ್ತಿಗಳಿಗೆ ಸಂಬಂಧಪಟ್ಟ ಹಾಗೆ ಒಂದು ಮಿತಿಯನ್ನು ಹಾಕಬೇಕೆಂದು ತೀರ್ಮಾನ ಇದೆಯೊ ಆ ಒಂದು ಹಕ್ಕನ್ನು ಈ ಸಭೆಯಲ್ಲಿ ಈಗ ಈ ನಿರ್ಣಯವನ್ನು ಒಪ್ಪುವುದರ ಮುಖೇನ ಕೇಂದ್ರ ಸರ್ಕಾರಕ್ಕೆ ನಾವು ಬಿಟ್ಟುಕೊಡುವುದು ಎಂಬುದನ್ನು ಅವರ ಅಭಿಪ್ರಾಯವನ್ನು ಸೂಚಿಸಿದ್ದಾರೆ. ನಮ್ಮ ಹೊಸ ಮಂತ್ರಿಮಂಡಲ ಅಧಿಕಾರಕ್ಕೆ ಬಂದಮೇಲೆ ಜನತೆಗೆ ಚುನಾವಣೆಯ ಸಂದರ್ಭದಲ್ಲಿ ಕೊಟ್ಟಂಥ ಆಶ್ವಾಸನೆಯನ್ನು ಈಡೇರಿಸುವ ಒಂದು ಉದ್ದೇಶದಿಂದ ಹಾಗೂ ಬಹಳ ಕಾತುರತೆಯಿಂದ ಅವರು ಕೊಟ್ಟಂಥ ವಾಗ್ದಾನಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಯತ್ನ ಮಾಡಿದರು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಆ ಪ್ರಯತ್ನಗಳಲ್ಲಿ ಇದೂ ಒಂದು.

ಶ್ರೀ ಎಚ್. ಡಿ. ದೇವೇಗೌಡ :—ಆ ಪ್ರಯತ್ನ ಬರೀ ಭಾಷಣದ ಮುಖಾಂತರವೇ ಆಯಿತು. ಸುಮಾರು 3–4 ತಿಂಗಳು ಒಂದೇ ನಮೂನೆ ಭಾಷಣಗಳೂ ಆದುವು. ನೀವು ಅಧಿಕಾರಕ್ಕೆ ಬಂದಮೇಲೆ, ಕೇಂದ್ರ ಸರ್ಕಾರದಲ್ಲಿ ಅವರು ಅಧಿಕಾರಕ್ಕೆ ಬಂದ ಒಂದು ವರ್ಷ ೧೧ ತಿಂಗಳುಗಳಲ್ಲಿ ಅವರು ಅದರ ಬಗ್ಗೆ ಇಂಪಾರ್ಷಿಯಲ್ ಆಗಿ ಭಾಷಣ ಮಾಡಿದರು. ನಾನು ಅದಕ್ಕೆ ವಿರೋಧಿಯಲ್ಲ. ಒಂದು ವೇಳೆ ನಾನು ವಿರೋಧಿಯಲ್ಲದಿದ್ದರೂ ನಮ್ಮ ಪಕ್ಷದವರು ವಿರೋಧಮಾಡಿದರೆಂದು ರಾಜಸ್ವ ಮಂತ್ರಿಗಳು ಹೇಳಬಹುದು ನಾನು ಈ ಪಕ್ಷದ ನಾಯಕನಾಗಿ ಕೆಲಸಮಾಡುವಾಗ ಈ ಒಂದು ವಿಷಯದಲ್ಲಿ ನಿಮ್ಮ ವೈಯಕ್ತಿಕ ಭಾವನೆ ಬೇರೆ ಇರಬಹುದು. ಆದರೆ ನಿಮ್ಮ ಪಕ್ಷದವರೇ ಕೆಲವರು ವಿರೋಧಮಾಡುತ್ತಾರೆಂದು ಹೇಳಬಹುದು. ನಿಮ್ಮ ಪಕ್ಷದಲ್ಲಿ ನೀವೂ ಹೆಚ್ಚಾಗಿದ್ದೀರಿ ಎಂದು ಹೇಳಬಹುದು. ನಾವು ಅದನ್ನು ಇಲ್ಲವೆಂದು ಹೇಳುವುದಿಲ್ಲ. ನಮ್ಮಲ್ಲಿಯೂ ೨೦–೨೧ ಜನರು ಗೆದ್ದು ಬಂದಿದ್ದೇವೆ. ನಾವೆಲ್ಲರೂ ಶ್ರೀಮಂತರ ಕಂಪೆನಿ ಎಂದು ಹೇಳಿ, ನೀವು ಹಚ್ಚಿದಂಥ ಬಣ್ಣವನ್ನು ತೊಳೆದುಕೊಂಡು ಗೆದ್ದು ಬಂದಿದ್ದೇವೆ. ಚುನಾವಣೆಯಲ್ಲಿ ಇಟ್ಟಂಥ ಪ್ರಣಾಳಿಕೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಈ ನಿರ್ಣಯ ಬಂದಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ಏನು ಹೇಳಿದೆಯೋ ಅದರಂತೆ ಮಾಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ :—ನಾವು ಶ್ರೀಮಂತರ ಏಜೆಂಟರಾದರೆ, ಮಾನ್ಯ ಶ್ರೀ ಚಂದ್ರಶೇಖರ್ ಅವರು ನಿಮ್ಮ ಏಜೆಂಟರಾಗಿರಬಹುದು.

ಸುಮಾರು ೩-೪ ತಿಂಗಳುಗಳಿಂದಲೂ ನೀವು ಹೇಳಿದಂಥ ವಾಗ್ದಾನಗಳು, ಭರವಸೆಗಳು, ಭಾಷಣಗಳ ಇವುಗಳನ್ನು ಏನಾದರೂ ಕರೆಯೋಣ. ನಗರದ ಆಸ್ತಿಮಿತಿಯ ರಚನೆಯ ಬಗ್ಗೆ ಕ್ರಾಂತಿಕಾರಕ ನಿರ್ಣಯವನ್ನು ತಂದಿದ್ದಾರೆ. ೨ ಲಕ್ಷ ರೂಪಾಯಿಗಳ ಮಿತಿಯನ್ನು ತಾವು ತೀರ್ಮಾನವನ್ನು ತಂದಿದ್ದೀರಿ. ನಾನು ಏತಕ್ಕೆ ಇದನ್ನು ಕೋಟ್ ಮಾಡುತ್ತಿದ್ದೇನೆಂದರೆ ಈ ನಿರ್ಣಯದಲ್ಲಿ ಮೈಸೂರು ಸರ್ಕಾರದ ಅಭಿಪ್ರಾಯವೇನೆಂಬುದು ಇಲ್ಲ. ನೀವು ೨ ಲಕ್ಷಕ್ಕೆ ಮಿತಿ ಇಟ್ಟು ಕಾನೂನು ಮಾಡುವಂಥ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಈಗ ಕೇಂದ್ರ ಸರ್ಕಾರದ ಮೇಲೆ ವಹಿಸುವಾಗ ನಿಮ್ಮ ಅಭಿಪ್ರಾಯವೇನೆಂಬುದನ್ನು ಈ ಮನೆಯಲ್ಲಿ ಸೂಚನೆ ಮಾಡಬೇಕು. ಇದು ಸರ್ಕಾರಿ ನಿರ್ಣಯ. ನಮ್ಮ ನಿರ್ಣಯವಲ್ಲ. ನಾವಾದರೆ ೧೦ ಲಕ್ಷ ರೂಪಾಯಿ ಇರಲಿ ಎಂದು ಹೇಳಿಬಿಡುತ್ತಿದ್ದೆವು. ಇದರಲ್ಲಿ ನಿಮ್ಮ ಅಭಿಪ್ರಾಯ ಏನೆಂದು ಹೇಳುತ್ತಾ ಇಲ್ಲ. ಈ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸುತ್ತಿದ್ದೀರಿ. ಆದರೆ ರಾಜಸ್ವ ಮಂತ್ರಿಗಳು ತಮ್ಮ ಪಕ್ಷದ ಒಂದು ನಿರ್ಣಯವನ್ನು ಇದರ ಬಗ್ಗೆ ತೆಗೆದುಕೊಂಡಂಥ ಕಾಲದಲ್ಲಿ ಆ ಮಂತ್ರಿಗಳೇ ಈ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿರುವುದರಿಂದ, ಎರಡು ಲಕ್ಷ ರೂಪಾಯಿಗಳು ನಗರದ ಆಸ್ತಿಮಿತಿ ಇರಬೇಕೆಂದು ಹೇಳುವಾಗ ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ನಿಮ್ಮ ಒಂದು ಅಭಿಪ್ರಾಯವನ್ನು ಹೇಳಬೇಕಾಗಿತ್ತು. ಅದನ್ನು ಹೇಳುವುದಕ್ಕೆ ನೀವು ಹೋಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ದಾವಾಷಾ ಪ್ರಕಾರ ಲೆಕ್ಕಹಾಕಿ, ಎರಡು ಮೂರು ದಿನಗಳಾದ ಮೇಲೆ ಸ್ವಲ್ಪ ಹೆಚ್ಚು ಕಡಿಮೆ ನಗರದ ಆಸ್ತಿಮಿತಿ ೩ ಲಕ್ಷ ರೂಪಾಯಿಗಿಂತ ಮೀರದು ಎಂದು ಹೇಳಿದ್ದಾರೆ. ಆ ರೀತಿಯಾಗಿ ಮೊದಲನೆಯ ನಿರ್ಣಯವನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ದಾವಾಷಾ ಪ್ರಕಾರ ಆ ರೀತಿಯಾಗಿ ಹೇಳಿದ್ದಾರೆ.

ಆ ಮೇಲೆ ಕಾನೂನು ಮಂತ್ರಿಗಳು ''ಮಸೂದೆಯ ರಚನೆಯ ಅತ್ತ ಮೊದಲ ಹೆಜ್ಜೆ'' ಎಂದು ಜೂನ್ ೧೬ನೇ ತಾರೀಖಿನ ಪೇಪರಿನಲ್ಲಿ ಬಂದಿದೆ. ಆಮೇಲೆ ಮುಖ್ಯಮಂತ್ರಿಯವರು ಹುಣಸೂರು ಭಾಷಣದಲ್ಲಿ ''ನಗರ ಆಸ್ತಿ ಬಗ್ಗೆ ಕಾನೂನು ರಚನೆಯಲ್ಲಿ ಮೊದಲ ಹೆಜ್ಜೆ'' ಎಂದು ಹೇಳಿದ್ದಾರೆ.

MR. DEPUTY SPEAKER.—So many things are written in the newspaper; it cannot be relied upon; it is not always authentic.

SRI H. D. DEVE GOWDA.—I am only referring to those points. If it is false, let them say that it is not correct or disprove it.

MR. DEPUTY SPEAKER.—The hon. Leader of the opposition can't refer to those newspaper cuttings. I cannot permit it.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಇನ್ನೊಂದು ಹೆಜ್ಜೆ ಮುಂದೆ ಹೋಗುತ್ತಾ 'ಆಸ್ತಿ ಮಿತಿ ಎರಡು ಲಕ್ಷ ರೂಪಾಯಿ: ಭಾರಿ ಕಟ್ಟಡಗಳು ಸರ್ಕಾರದ ವಶಕ್ಕೆ'' ಎಂದು ತಮ್ಮ ಹುಣಸೂರು ಭಾಷಣದಲ್ಲಿ ಹೇಳಿದ್ದಾರೆ. ಇದು ಮೇ ೨೨ರ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ನಾನು ಇವತ್ತು ಈ ವಿಷಯ ಏಕೆ ಹೇಳುತ್ತಿದ್ದೇನೆಂದರೆ ಬಡತನವನ್ನು ನಿವಾರಣೆ ಮಾಡುವುದಕ್ಕೆ ನಿಮ್ಮಲ್ಲಿ ಕಳಕಳಿಯ ಭಾವನೆ ಇಲ್ಲವೆಂದು ಅಪರಾಧ ಹೊರಿಸುವುದಕ್ಕೆ ಅಲ್ಲ. ನಿಮ್ಮಲ್ಲಿಯೂ ಅನೇಕ ಜನರಲ್ಲಿ ಆ ಭಾವನೆ ಇದೆ: ಅದನ್ನೂ ಒಪ್ಪಿಕೊಳ್ಳೋಣ ಏಕೆಂದರೆ ನಾವಂತೂ ಶ್ರೀಮಂತರ ಪರ ಎಂದು ತಾವು ಹೇಳುತ್ತಿದ್ದೀರಲ್ಲ ಆದರೆ ಬಡವರ ಬಗ್ಗೆ ಅತೀ ಹೆಚ್ಚು ಕಳಕಳಿಯಿಂದ ನಡೆಯುತ್ತೇವೆಂದು ವಾದವನ್ನು ಪ್ರತಿಪಾದನೆ ಮಾಡುವಾಗ ಅಗ್ಗದ ಭಾಷಣ ಹೊಡೆಯುವುದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲ. ಆದರೆ ಇದರ ಬಗ್ಗೆ ತಮಗೆ ಕಾತುರತೆ ಇಲ್ಲವೆಂದು ಏನೂ ಅಲ್ಲ. ಆದರೆ ಈ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ನಿಮ್ಮಲ್ಲೆ ಒಂದು ಗೊಂದಲ ಉಂಟಾಗಿದೆ. ಒಬ್ಬರು ಎರಡು ಲಕ್ಷ, ಇನ್ನೊಬ್ಬರು ಮೂರು ಲಕ್ಷ: ಆ ಮೇಲೆ ಕೇಂದ್ರದ ಸಮಿತಿಯವರು ೫ ಲಕ್ಷ—ಇತ್ಯಾದಿ ಹೇಳುವುದನ್ನು ನೋಡಿದರೆ ನಿಮ್ಮಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂದು ಗೊತ್ತಾಗುತ್ತದೆ. ಮಾನ್ಯ ಗುಂಡೂರಾಯರಿಗೂ ಇದರಲ್ಲಿ ಆಸಕ್ತಿ ಇದೆ. ಬಹುಶಃ ಅವರು ಲಕ್ಷದ ಆಸ್ತಿ ಇನ್ನೂ ನೋಡಿಲ್ಲವೆಂದು ಕಾಣುತ್ತದೆ. ನಾವಂತೂ ಅವರ ಪರ ವಾದ ಮಾಡುವುದಕ್ಕೆ ಬಂದ ಜನ. ಆದರೆ ಈ ಒಂದು ಆಸ್ತಿಗೆ ಮಿತಿ ಹಾಕತಕ್ಕ ಕಾನೂನನ್ನು ಕಾರ್ಯಾಚರಣೆಗೆ ತರುವುದಕ್ಕೆ ಇರುವುದೇ ಒಂದು ದೊಡ್ಡ ಸಮಸ್ಯೆ. ಮಾನ್ಯ ಹುಚ್ಚುಮಾಸಿ ಗೌಡರು ಎರಡು ಲಕ್ಷಕ್ಕಿಂತ ಹೆಚ್ಚು ಕೊಡಬಾರದು ಎನ್ನುವ ಅಭಿಪ್ರಾಯದಲ್ಲಿರಬಹುದು. ಆದರೆ ಕಾರ್ಯರೂಪಕ್ಕೆ ತರುವ ಕಾಲದಲ್ಲಿ ಸರ್ಕಾರಕ್ಕೆ ಒಂದು ಸಂದಿಗ್ಧ ಪರಿಸ್ಥಿತಿ ಬಂದಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಈಗಾಗಲೇ ಕೆಲವು ರಾಜ್ಯಗಳಲ್ಲಿ ಅದರ ಬಗ್ಗೆ ಕಾನೂನು ಸಹ ಮಾಡಿದ್ದಾರೆ. ಪಂಜಾಬ್, ಯು.ಪಿ. ಮತ್ತಿತರ

(ಶ್ರೀ ಎಚ್. ಡಿ. ದೇವೇಗೌಡ)

ಕೆಲವು ರಾಜ್ಯಗಳಲ್ಲಿ ಈ ರೀತಿಯ ಕಾನೂನನ್ನು ಮಾಡಿದ್ದಾರೆ. ಅದೇ ರೀತಿ ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ರೀತಿಯಲ್ಲಿ ಒಂದು ಕಾನೂನನ್ನು ಕೇಂದ್ರದವರು ತರುವುದಕ್ಕೆ ಪಾರ್ಲಿಮೆಂಟಿನಲ್ಲಿ ಮಸೂದೆಯನ್ನು ಸಹ ಮಂಡಿಸಿದ್ದಾರೆಂದು ಹೇಳಿದ್ದಾರೆ. ಆದರೆ ಇವರು ಹೇಳಿರತಕ್ಕದ್ದರಲ್ಲಿ ಬಡವರ ಶ್ರೀಮಂತರ ಅಂತರವನ್ನು ತೆಗೆದು ಬಡವರಿಗೆ ಹೆಚ್ಚು ಪ್ರಯೋಜನವಾಗುವಂತೆ ಸಹಾಯ ಸಹಕಾರ ಮಾಡುತ್ತಾರೆಯೇ ಎಂಬ ಸಂಶಯ ನಮಗೆ ಬಂದಿರುವುದು. ನಿಮ್ಮ ಪಕ್ಷದ ಸಮಿತಿ ಇದರ ಬಗ್ಗೆ ಆಲೋಚಿಸಿ ಮಾಡಿ ಕೊಟ್ಟಿರತಕ್ಕಂತಹ ಶಿಫಾರಸು ಏನಿದೆ, ಅದರಲ್ಲಿ ಹೋಟೆಲಿಗೆ ಎಗ್ಸೆಮ್ಷನ್ ಕೈಗಾರಿಕಗಳಿಗೆ ಎಗ್ಸೆಮ್ಷನ್, ಸಿನಿಮಾಗಳಿಗೆ ಎಗ್ಸೆಮ್ಷನ್ ಮತ್ತು ವಾಸದ ಮನೆಗಳಿಗೂ ಎಗ್ಸೆಮ್ಷನ್ ಕೊಟ್ಟಿದ್ದಾರೆ. ಇನ್ನು ಏನು ಹಿಡಿಯುವುದಕ್ಕೆ ಮಾನ್ಯ ಹುಚ್ಚಮಾಸ್ತಿಗೌಡರು ಹೊರಟಿದ್ದಾರೆ ಎಂದು ಕೇಳುತ್ತೇನೆ ? ಒಬ್ಬ ೫ ಲಕ್ಷ ಟ್ಯಾಕ್ಸ್ ಕೊಟ್ಟರೆ ಸಾಕು, ಅವನು ಇಟ್ಟುಕೊಳ್ಳಬಹುದೆಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ.

4 P.M.

ಇವೊತ್ತು ನಗರ ಆಸ್ತಿಯಮೇಲೆ ಮಿತಿಯನ್ನು ಹಾಕತಕ್ಕ ಬಗೆ ಪ್ರಾಮಾಣಿಕವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇದರಿಂದ ಎಷ್ಟರಮಟ್ಟಿಗೆ ಶ್ರೀಮಂತ ವರ್ಗವನ್ನು ತಗ್ಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನಗೆ ಇರತಕ್ಕ ಸಂಶಯ. ಏತಕ್ಕೆಂದರೆ ಬಹುಶಃ ಇದಕ್ಕೆ ಸಾಕಷ್ಟು ಗೊಂದಲ ಕೇಂದ್ರದಲ್ಲಿ ಇದೆ. ಮತ್ತು ಇವರ ಮನಸ್ಸಿನಲ್ಲಿಯೂ ಇದೆ. ಈಗ ಬೆಂಗಳೂರಿನಲ್ಲಿ ೧೦ ಚದುರ ಮನೆ ೩ ಲಕ್ಷ ರೂಪಾಯಿಗಳಾದರೆ ಇಷ್ಟೇ ಅಳತೆ ಇರುವ ಮನೆ ಕಡೂರಿನಲ್ಲಿ ಎಷ್ಟು ಬೆಲೆ ಆಗುತ್ತದೆ. ಎಂಬುದನ್ನು ಯೋಚನೆ ಮಾಡಬೇಕು. ಇವೊತ್ತು ಕೇಂದ್ರ ಸರ್ಕಾರದವರು ೫ ಲಕ್ಷ ರೂಪಾಯಿಗಳ ಮಿತಿಯನ್ನು ಹಾಕಿ ಮಸೂದೆಯನ್ನು ಪಾಸು ಮಾಡುತ್ತಾರೆಯೇ ಅಥವಾ ಎಷ್ಟು ಲಕ್ಷ ರೂಪಾಯಿಗಳ ಮಿತಿಯನ್ನು ಹಾಕುತ್ತಾರೆ ಎನ್ನುವುದನ್ನು ಹೇಳಲಿಲ್ಲ ೫ ಲಕ್ಷ ರೂಪಾಯಿಗಳ ಆಸ್ತಿ ಮಿತಿಯನ್ನು ಹಾಕುತ್ತಾರೆಯೇ ೪ ಲಕ್ಷ ರೂಪಾಯಿಗಳ ಮಿತಿಯನ್ನು ಹಾಕುತ್ತಾರೆಯೋ ಎಂಬುದು ಮಸೂದೆ ಪಾಸಾಗಿ ಹೊರಗಡೆ ಬಂದಮೇಲೆ ಗೊತ್ತಾಗುತ್ತದೆ. ಒಂದು ವೇಳೆ ಕೇಂದ್ರಸರ್ಕಾರದವರ ಶಿಫಾರಸ್ಸನ್ನು ಒಪ್ಪಿಕೊಂಡರೆ ಪ್ರಾಮಾಣಿಕವಾಗಿ ಆಸ್ತಿಮಿತಿಯನ್ನು ತರುವುದಕ್ಕೆ ಸಾಧ್ಯವಿದೆಯೇ ? ಈ ಊರಿನಲ್ಲಿ ಎಂದರೆ ಬೆಂಗಳೂರಿನಲ್ಲಿ ೧೦ ಸ್ಕ್ವೇರ್ ಮನೆಗೆ ೩ ಲಕ್ಷ ರೂಪಾಯಿಗಳಾದರೆ ಇಂಥ ಒಂದು ಮನೆ ಕಡೂರಿನಲ್ಲಿ ಇದ್ದರೆ ಇಷ್ಟೇ ಬೆಲೆ ಆಗುತ್ತದೆಯೇ ? ಅಲ್ಲಿ ಇಂಥಾಮನೆ ೨೦ ಸಾವಿರ ರೂಪಾಯಿಗಳಾಗಬಹುದು.

ಶ್ರೀರಾಮುಲು.—ಬೆಂಗಳೂರಿನಲ್ಲಿ ೧೦ ಸ್ಕ್ವೇರ್ ಮನೆಗೆ ೩ ಲಕ್ಷ ರೂಪಾಯಿ ಹೇಗಾಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಡಿ ದೇವೇಗೌಡ.—ಅವೆನ್ಯೂ ರೋಡಿನಲ್ಲಿ ಒಂದು ಸೈಟಿನ ಬೆಲೆ ಏನಾಗುತ್ತದೆ ಎಂಬುದನ್ನು ವಿಮರ್ಶೆ ಮಾಡಬೇಕು. ೧೦ ಸ್ಕ್ವೇರಿನ ಮೂರು ಸ್ಟೋರೀಸ್ ಇರುವ ಮನೆಯ ಬೆಲೆ ಎಷ್ಟು ಆಗುತ್ತದೆ ಎಂಬುದನ್ನು ಲೆಕ್ಕ ಹಾಕಿ.

ಶ್ರೀ ಕೆ. ಶ್ರೀರಾಮುಲು.—ಅದರ ಬೆಲೆ ಏನಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ತಾವು ಇತಿ ಮಿತಿ ಇಲ್ಲದೇ ಹೇಳುತ್ತಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.—ಅವೆನ್ಯೂರೋಡಿನಲ್ಲಿ ೧೦ ಸ್ಕ್ವೇರಿನ ಮೂರು ಮಹಡಿಯ ಮನೆಯನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿ ಆಗ ನಿಮಗೆ ಗೊತ್ತಾಗುತ್ತದೆ. ಒಂದು ಅಂಗಡಿಗೆ ೨೫–೩೦,೫೦ ಸಾವಿರ ರೂಪಾಯಿಗಳವರೆಗೂ ಪಗಡಿ ಕೊಡುತ್ತಾರೆ. ವಾಸದ ಮನೆಯ ಮುಂದೆ ಅಂಗಡಿಯನ್ನು ಕಟ್ಟಿರುತ್ತಾರೆ. ಆಗ ವಾಸ್ತವವಾಗಿ ಅಂಗಡಿಗಳು ಮನೆ ಎಲ್ಲಾ ಸೇರಿಸಿಕೊಂಡು ೩ ಲಕ್ಷ ರೂಪಾಯಿಗಳಾಗುತ್ತದೆ. ಆದರೆ ಇದೇ ಅಳತೆಯುಳ್ಳ ಮನೆ ಕಡೂರಿನಲ್ಲಿ ೨೦ ಸಾವಿರ ರೂಪಾಯಿಗಳಾಗುತ್ತದೆ. ಮತ್ತು ಇದೇ ಅಳತೆಯ ಮನೆ ಬೊಂಬಾಯಿನಲ್ಲಿ ೬ ಲಕ್ಷ ರೂಪಾಯಿಗಳಾಗಬಹುದು. ಹೀಗಿರುವಾಗ ಬೆಂಗಳೂರು, ಮಂಗಳೂರು ಮತ್ತು ಕಡೂರು ಈ ಎಲ್ಲಾ ಪ್ರದೇಶಗಳಿಗೂ ಈ ಆಸಿ ಮಿತಿ ಒಂದೇ ರೀತಿ ಅನ್ವಯವಾಗುತ್ತದೆಯೇ ಹೇಗೆ ಎಂಬುದನ್ನು ಹೇಳಬೇಕು. ಇವೊತ್ತು ತಾವು ಈ ಒಂದು ನಗರಾಸ್ತಿ ಮಿತಿಯನ್ನು ಹಾಕತಕ್ಕಂಥಾ ಕಾಲದಲ್ಲಿ ಇದರಿಂದ ಸಾಮಾಜಿಕ ನ್ಯಾಯವನ್ನು ಸಾಧಿಸಲು ಸಾಧ್ಯವೇ, ಇದರ ಬಗ್ಗೆ ನಿಮ್ಮ ಸ್ಪಷ್ಟವಾದ ನಿಲುವು ಏನು ಎಂಬುದನ್ನು ವಿವರಿಸಿಲ್ಲ. ಇದನ್ನು ಜಾರಿಗೆ

ತರುವುದಕ್ಕೆ ಕಷ್ಟವಾಗುತ್ತದೆ. ಇದರ ಜೊತೆಗೆ ಈಗಾಗಲೇ ಬೇರೆ ರಾಜ್ಯಗಳು ಇದಕ್ಕೆ ಸಂಬಂಧಪಟ ಶಾಸನವನ್ನು ಮಾಡಿದ್ದಾರೆ. ಆದ್ದರಿಂದ ಈಗ ಈ ನಗರಾಸ್ತಿ ಮಿತಿಯ ಬಗ್ಗೆ ನಮ್ಮ ರಾಜ್ಯ ಸರ್ಕಾರದ ಸ್ಪಷ್ಟವಾದ ಅಭಿಪ್ರಾಯ ಏನು ಎಂಬುದನ್ನು ತಿಳಿಸಿದರೆ ಒಳ್ಳೆಯದು. ಇವೊತ್ತು ಈ ದೇಶದಲ್ಲಿ ಈ ಒಂದು ಬಡತನ ಮತ್ತು ಸಿರಿತನದ ಅಂತರವನ್ನು ಕಡಿಮೆ ಮಾಡತಕ್ಕದ್ದು ಒಳ್ಳೆಯ ಸದುದ್ದೇಶದಿಂದ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ಇವೊತ್ತು ಕೇಂದ್ರದ ವರಿಷ್ಠರ ಸಮಿತಿಯವರು ಕೊಟ್ಟಿರತಕ್ಕ ಶಿಫಾರಸ್ಸು ಏನಿದೆ ಅದನ್ನು ಒಪ್ಪಿಕೊಂಡರೆ ಈ ಆಸ್ತಿಮಿತಿ ಶಾಸನವನ್ನು ಜಾರಿಗೆ ತರುವುದಕ್ಕೆ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆಯೇ ? ೫ ಲಕ್ಷ ರೂಪಾಯಿಗಳಿಗೆ ಮೀರಿದ ಬೆಲೆಯ ಮನೆಗಳನ್ನು ಇಟ್ಟುಕೊಳ್ಳಬಹುದು, ಆದರೆ ಅವರು ಹೆಚ್ಚಿನ ತೆರಿಗೆಯನ್ನು ಕೊಟ್ಟರೆ ಸಾಕು ಎನ್ನುವುದಾದರೆ ಇದರ ಮೂಲ ಉದ್ದೇಶ ಸಾಧನೆಯಾಗುತ್ತದೆಯೇ ಎನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಒಂದು ವೇಳೆ ನಾವು ಇದಕ್ಕೆ ಒಪ್ಪಿಗೆ ಕೊಡಲಿಲ್ಲ ಎಂದು ನಮ್ಮನ್ನು ಶ್ರೀಮಂತರ ಪಕ್ಷದವರು ಎಂದು ನಮ್ಮ ಮೇಲೆ ಅಪಾದನೆ ಮಾಡಿದರೆ ನಾನು ಅದನ್ನು ಸ್ವೀಕಾರ ಮಾಡುತ್ತೇನೆ. ಇವರು ನಮ್ಮನ್ನು ಏನೇ ಶ್ರೀಮಂತರ ವರ್ಗದಪಕ್ಷದವರು ಎಂದರೂ ನಾವು ೨೩ ಜನ ಗೆದ್ದು ಬಂದಿದ್ದೇವೆ. ಆದರೆ ಈ ಮೂಲ ಸಮಸ್ಯೆಯ ಬಗ್ಗೆ ನಿಮ್ಮಲ್ಲೇ ಗೊಂದಲ ಇದೆ. ಯಾರೇ ಆಗಲಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಠಿಣವಾದ ಕ್ರಮವನ್ನು ತೆಲೆದುಕೊಂಡರೆ ನಾನು ಒಪ್ಪಿಕೊಳ್ಳುತ್ತೇನೆ. ಏತಕ್ಕೆಂದರೆ ಇವೊತ್ತು ೧೮ ಎಕರೆ ಸೀಲಿಂಗ್ ಇದ್ದದ್ದನ್ನು ೧೦ ಎಕರೆ ಮಾಡಬೇಕೆಂಬ ಆಶೆ ನಿಮ್ಮ ಮನಸ್ಸಿನಲ್ಲಿ ಉಳಿದಿದೆ. ಆದರೆ ಇವೊತ್ತು ಕೇಂದ್ರಕ್ಕೆ ನೀವು ಅಧಿಕಾರ ಕೊಟ್ಟು ಬಿಟ್ಟರೆ, ನಿಮ್ಮ ಮನಸ್ಸಿನಲ್ಲಿರತಕ್ಕಂಥ ಒಂದು ಆಸೆಯನ್ನು ಈಡೇರಿಸುವುದಕ್ಕಾಗುವುದಿಲ್ಲ. ಎರಡು ಲಕ್ಷಕ್ಕೂ ಹೆಚ್ಚು ಆಸ್ತಿಮಿತಿ ನಗರದಲ್ಲಿರುವವರಿಗೆ ಇರಬಾರದು ಎಂಬ ತಕ್ಕಂಥ ಒಂದು ಆಶಾಭಾವನೆಯನ್ನು ಏನು ತಾವು ಇಟ್ಟುಕೊಂಡಿದ್ದೀರಿ ಮತ್ತು ಅದನ್ನು ಪ್ರತಿಪಾದನೆ ಮಾಡುತ್ತಿದ್ದೀರಿ ಅದನ್ನು ಕಾರ್ಯರೂಪಕ್ಕೆ ಇಳಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ ಎಂದು ನಾನು ಹೇಳುತ್ತಿರುವುದು, ಇವೊತ್ತು ಪಟ್ಟಣದಲ್ಲಿ ಆಸ್ತಿಯ ಮಿತಿಯನ್ನು ತಂದರೂ ಸಹ ಆ ಒಂದು ಮಿತಿಯ ಜೊತೆಗೆ ಬೇಕಾದರೆ ಹಳ್ಳಿಯಲ್ಲಿ ೧೦ ಲಕ್ಷ ರೂಪಾಯಿಗಳ ಆಸ್ತಿಯನ್ನು ಇಟ್ಟುಕೊಳ್ಳಬಹುದು. ಅದಕ್ಕೆ ಅಡ್ಡಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಕಾನೂನು ಅಡ್ಡಿ ಬರಲಾರದು, ಕಾರ್ಪೊರೇಷನ್ ಏರಿಯಾ ಬಿಟ್ಟು ಗ್ರೇಪ್ ಗಾರ್ಡನನ್ನು ಇಟ್ಟುಕೊಂಡರೆ ಯಾರೂ ಕೇಳುವುದಕ್ಕಾಗುವುದಿಲ್ಲ. ಈಗ ಭೂಮಿತಿಯ ಜೊತೆಗೆ ನಗರಾಸ್ತಿಯ ಮೇಲೂ ಮಿತಿ ತರಬೇಕೆಂದು ಇದ್ದೀರಿ. ಒಂದು ಕಡೆ ೧೦ ಎಕರೆಯ ಮೇಲೆ ಹೆಚ್ಚು ಜಮೀನು ಯಾರಿಗೂ ಇರಬಾರದೆಂದು ಹೇಳುತ್ತಿದ್ದೀರಿ. ಶೇಕಡ ೯೬-೯೮ ಪರಸೆಂಟ್ ಜನರು ೧೦ ಎಕರೆಯ ಮಿತಿಯಲ್ಲಿಯೇ ಬರುತ್ತಾರೆಂದು ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದೇ ರೀತಿ ನಗರಾಸ್ತಿಯ ಮೇಲೂ ಸಹ ಮಿತಿ ತಂದರೂ, ಆ ಮಿತಿಯೊಳಗೆ ಸಿನಿಮಾ ಥಿಯೇಟರುಗಳು ಮತ್ತು ಹೋಟೇಲ್‌ಗಳು ಬರುವುದಿಲ್ಲ. ಸಿನಿಮಾ ಥಿಯೇಟರುಗಳು ಮತ್ತು ಹೋಟೆಲ್ ಬಿಲ್ಡಿಂಗ್‌ಗಳ ಬೆಲೆ ೨೦-೩೦ ಲಕ್ಷ ರೂಪಾಯಿಗಳಾಗುತ್ತದೆ. ಇವುಗಳ ಮೇಲೂ ಸಹಾಮಿತಿ ಹಾಕದಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ನಗರಾಸ್ತಿಯ ಮೇಲೆ ಮಿತಿ ತರಬೇಕೆಂದು ಹೇಳುವಾಗ, ತಾವೇ ಒಂದು ಪ್ರಗತಿಪರವಾದಂಥ ನಿರ್ಣಯವನ್ನು ಆಲೋಚನೆ ಮಾಡಿ ತಂದು ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದರೆ ಚೆನ್ನಾಗಿರುತ್ತಿತ್ತು. ಎರಡು ಲಕ್ಷದ ಆಸ್ತಿ ಮಿತಿಗೆ ತಯಾರಾಗಿದ್ದೇವೆಂದು ನೀವೇ ತಿಳಿಸುವುದಕ್ಕೆ ಬದಲು, ಈ ಒಂದು ಕಾನೂನನ್ನು ಮಾಡಲು ಕೇಂದ್ರಕ್ಕೆ ಅಧಿಕಾರ ಕೊಡುತ್ತಿದ್ದೀರಿ. ಏಕಗೂಪತೆ ಕಾನೂನು ಬೇಕು ಎಂಬ ನೆವದಿಂದ ಹಿಂದೆ ನಿಮ್ಮ ಸಂಸ್ಥೆಯವರು ಕೊಟ್ಟ ವಾಗ್ದಾನವನ್ನು ಬದಿಗಿಟ್ಟು ಕೇಂದ್ರದ ಕಡೆ ಈಗ ಕೈತೋರಿಸುತ್ತಿದ್ದೀರಿ, ಆಸ್ತಿ ಮಿತಿಯನ್ನು ತರುತ್ತೇವೆಂದು ತಾವು ಈ ಹಿಂದೆ ರಾಜ್ಯಮಟ್ಟದಲ್ಲಿ ಜನತೆಗೆ ಏನು ಒಂದು ವಾಗ್ದಾನವನ್ನು ಕೊಟ್ಟಿರೋ ಅದು ಹುಸಿಯಾಗಿದೆ. ಈ ಮನೆಯ ಒಟ್ಟು ೨೧೬ ಜನರೂ ಒಪ್ಪಿಕೊಳ್ಳುವುದಾದರೆ ಕೈಗಾರಿಕಾ ಆಸ್ತಿಯ ಮೇಲೂ ಸಹ ಮಿತಿ ತರೋಣ. ಈ ರೀತಿ ಎಲ್ಲ ಆಸ್ತಿಗಳ ಮೇಲೂ ಮಿತಿ ತರದೆ, ಮಿತಿಗಿಂತ ಹೆಚು ಆಸ್ತಿ ಇದ್ದರೆ ಅಡಿಶನಲ್ ಟ್ಯಾಕ್ಸ್ ಹಾಕೋಣ ಎಂದು ಹೇಳುವುದಾದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಕೇವಲ ವೆಲ್ತ್ ಟ್ಯಾಕ್ಸ್ ಮತ್ತು ಆಸ್ತಿ ತೆರಿಗೆ ಹಾಕುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ನನಗೆ ಅನುಭವವಿಲ್ಲ, ಮಾನ್ಯ ಕೃಷ್ಣ ಅವರಿಗೆ ಮತ್ತು ಮಾನ್ಯ ಹುಚ್ಚಮಾಸ್ತಿಗೌಡರಿಗೆ ಅನುಭವವಿರಬಹುದು. ಒಂದು ಜೊತೆ ವಜ್ರದೋಲೆಯ ಬೆಲೆ ೩೦ ಸಾವಿರ ರೂಪಾಯಿಗಳಾಗುತ್ತದೆ ಮತ್ತು ಒಂದು ವಜ್ರದುಂಗುರ ಬೆಲೆ ೮-೧೦ ಸಾವಿರ ರೂಪಾಯಿಗಳಾಗುತ್ತದೆಂದು ಹೇಳುತ್ತಾರೆ. ಸೀಲಿಂಗ್ ಹಾಕಬೇಕೆಂದು ಹೊರಟ ಮೇಲೆ ಹಿಂದೆಮುಂದೆ ನೋಡದೆ ಎಲ್ಲದರ ಮೇಲೂ ಹಾಕಬೇಕು. ಈ ರೀತಿ ಮಾಡಿದರೆ ಮಾತ್ರ, ನೀವು ಜನರಿಗೆ ಅದರಲ್ಲೂ ಬಡಜನರಿಗೆ ಏನು ಒಂದು ಆಶಾಭಾವನೆಯನ್ನು ವ್ಯಕ್ತಪಡಿಸಿದ್ದೀರಿ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಈ ರೀತಿಯ ಒಂದು ಬಿಲ್‌ನ್ನು ತೆಗೆದುಕೊಂಡು ಬನ್ನಿ. ನನ್ನನ್ನು ನಮ್ಮ ಪಕ್ಷದವರು ಕಿತ್ತುಹಾಕಿದರೂ ಸರಿಯೇ, ನಿಮ್ಮ ಜೊತೆ ಸಂಪೂರ್ಣ ಸಹಕಾರ ಮಾಡುತ್ತೇನೆ. ಎಲ್ಲದರ ಮೇಲೂ ಮಿತಿ

(ಶ್ರೀ ಎಚ್. ಡಿ. ದೇವೇಗೌಡ)

ಹೇರದೆ, ಕೇವಲ ಮನೆಗಳ ಮೇಲೆ ೫ ಲಕ್ಷ ರೂಪಾಯಿಗಳವರೆಗೆ ಮಿತಿ ಇಟ್ಟು, ಅದಕ್ಕಿಂತ ಹೆಚ್ಚು ಆಸ್ತಿ ಇದ್ದರೆ, ಅದರ ಮೇಲೆ ತೆರಿಗೆ ಹಾಕುತ್ತೇನೆಂದು ಹೇಳಿದರೆ, ಸಿನಿಮಾ, ಕಾರ್ಖಾನೆ, ಹೋಟೇಲ್‌ಗಳಿಗೆ ರಿಯಾಯಿತಿ ಕೊಡಲಾಗುತ್ತದೆಂದು ಹೇಳುವುದಾದರೆ, ಸರ್ಕಾರದವರು ಪಡೆದುಕೊಳ್ಳುವುದಾದರೂ ಏನು, ಬಡವರಿಗೆ ಹಂಚುವುದಾದರೂ ಏನು ಎಂದು ಕೇಳುತ್ತೇನೆ. ಇವರು ಆಸ್ತಿಯ ಮಿತಿಯ ವಿಚಾರದಲ್ಲಿ ಎಲ್ಲಿಯವರೆಗೂ ಹೋಗಿದ್ದರೂ ಎಂಬುದನ್ನು ಬೇಕಾದರೆ ದೇವರ ಹೆಸರಿನಲ್ಲಿ ಪ್ರಮಾಣಮಾಡಿ ಹೇಳುತ್ತೇನೆ ಶ್ರೀಮಾನ್ ರಾಜಶೇಖರಮೂರ್ತಿಯವರ ಹತ್ತಿರ ಇರುವ ಹೆಚ್ಚಿನ ಆಸ್ತಿಯನ್ನು ಕಿತ್ತು ತಿಮ್ಮಪ್ಪನಿಗೆ ಕೊಡುತ್ತೇವೆಂದು ಹೇಳಿ ಜನರನ್ನು ನಂಬಿಸಿದ್ದರು. ಶ್ರೀಮಾನ್ ರಾಜಶೇಖರಮೂರ್ತಿಯವರ ಆಸ್ತಿ ಎಷ್ಟಿದೆಯೋ ನನಗೆ ಗೊತ್ತಿಲ್ಲ. ಜಾಸ್ತಿ ಇದ್ದರೆ ಕಿತ್ತುಕೊಳ್ಳಲಿ. ಹೆಚ್ಚಿನ ಆಸ್ತಿಯನ್ನು ಕಿತ್ತು ಬಡವರಿಗೆ ಹಂಚುತ್ತೇವೆಂದು ಪ್ರಲಾಪ ಮಾಡುತ್ತಿದ್ದವರು, ಇಂದು ಆ ಒಂದು ಅಧಿಕಾರವನ್ನು ಕೇಂದ್ರಕ್ಕೆ ಬಿಟ್ಟುಕೊಡೋಣ ಎಂದು ಹೇಳುತ್ತಿದ್ದಾರೆ. ಈ ದಿಶೆಯಲ್ಲಿ ಸರ್ಕಾರದವರು ಈ ಸಭೆಯ ಮುಂದೆ ಇಂದು ಏನು ಒಂದು ನಿರ್ಣಯವನ್ನು ಇಟ್ಟಿದ್ದಾರೆ. ಇದು ತಮ್ಮ ಒಂದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಾಗಿದೆ. ಈಗ ಇವರು ಅಧಿಕಾರ ವಹಿಸಿಕೊಂಡು ೮ ತಿಂಗಳಾಯಿತು ಇನ್ನೂ ವರ್ಷದ ಹಾದಿಯಲ್ಲಿ ಇದ್ದಾರೆ. ಇನ್ನು ನಾಲ್ಕು ವರ್ಷದ ನಂತರ ಅಂತ್ಯ ಬರುತ್ತದೆ. ಆಗ ಚುನಾವಣೆಯಲ್ಲಿ ಜನರು ತೀರ್ಮಾನ ಮಾಡುತ್ತಾರೆ. ಮನೆ ಇಲ್ಲದವರಿಗೆ ಮನೆ ಕೊಡುತ್ತೇವೆ, ಆಸ್ತಿಯ ಮೇಲೆ ಮಿತಿ ತರುತ್ತೇವೆಂದು ಒಂದೇ ಸಮನೆ ಮೂರು ತಿಂಗಳ ಕಾಲ ಭಾಷಣ ಮಾಡಿದರು. ಅದು ಪತ್ರಿಕೆಗಳಲೆಲ್ಲಾ ವರದಿಯಾಗಿದೆ. ಅ ಪತ್ರಿಕೆಗಳನ್ನು ಓದಿದವರೆಲ್ಲಾ ಬಾಯಲ್ಲಿ ಜೊಲ್ಲು ಸುರಿಸಿಕೊಂಡು ನಿಂತಿದ್ದರು. ತಮಗೆಲ್ಲಾ ಮನೆಗಳು ಸಿಗುತ್ತದೆಂದು. ಈ ರೀತಿ ಆಸ್ತಿ ಮಿತಿ ತರುವುದರಿಂದ ನಗರಗಳಲ್ಲಿರುವ ಮನೆಗಳ ದರ ಇಳಿದುಹೋಗುತ್ತದೆಂದು ಕೆಲವರು ಭಾವಿಸಿದರು. ಆದರೆ ಈಗ ಆಗುತ್ತಿರುವುದೇನು ? ಮಹಡಿ ಮನೆಗಳನ್ನು ಕಟ್ಟುವವರು ಕಟ್ಟುತ್ತಲೇ ಇದ್ದಾರೆ ಮನೆಗಳ ದರ ಏರುತ್ತಲೇ ಇದೆ. ಸೈಟ್ ಮಾಡುವವರು ಮಾಡುತ್ತಲೇ ಇದ್ದಾರೆ. ಹೌಸಿಂಗ್ ಬೋರ್ಡ್ ಚೇರ್‌ಮನ್‌ಗೆ ಮತ್ತು ಟ್ರಸ್ಟ್ ಬೋರ್ಡ್ ಚೇರ್‌ಮನ್‌ಗೆ ಶಿಫಾರಸ್ ಮಾಡಿ ಎಂದು ಕೆಲವರು ನನ್ನ ಹತ್ತಿರ ಬಂದು ಕಾಡುವುದು ತಪ್ಪೇ ಇಲ್ಲ. ಪ್ಯಾಲೆಸ್ ಆರ್ಚರ್ಡ್ಸ್‌ನಲ್ಲಿ ಮನೆಗಳನ್ನು ಕಟ್ಟಿಸುವುದು ನಡೆಯುತ್ತಲೇ ಇದೆ. ನಿನ್ನೆತಾನೆ ಫ್ಲ್ಯಾಟ್ಸ್‌ನ್ನು ಹೊಂದುವ ಬಿಲ್‌ನ್ನು ಪಾಸ್ ಮಾಡಿದರು. ಇದರಿಂದ ಹೆಂಡತಿ, ಸೊಸೆ, ಮಗ ಎಲ್ಲರೂ ತಮ್ಮ ತಮ್ಮ ಹೆಸರಿನಲ್ಲಿ ಒಂದೊಂದು ಫ್ಲ್ಯಾಟ್ಸ್ ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆ ವಿಚಾರ ಈಗ ಬೇಡ. ಈಗ ಆಸ್ತಿ ಮಿತಿಯ ಬಗ್ಗೆ ನಾವು ಚರ್ಚೆ ಮಾಡೋಣ ಈ ಒಂದು ಆಸ್ತಿ ಮಿತಿಯನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಏಕಕಾಲದಲ್ಲಿ ತರದೇ ಹೋದರೆ, ಸುಖಪಡುವವರು ಸುಖಪಡುತ್ತಲೇ ಇರುತ್ತಾರೆ. ಕಷ್ಟದಲ್ಲಿರುವವರು ಆ ಕಷ್ಟದಲ್ಲೇ ಇರುತ್ತಾರೆ. ಸುಖಪಡುವವರಿಗೆ ಯಾವ ರೀತಿಯಿಂದಲೂ ಅಡ್ಡಿಪಡಿಸುವುದಕ್ಕಾಗುವುದೇ ಅಲ್ಲ. ಒಂದು ರಾತ್ರಿಗೆ ಸಾವಿರ ರೂಪಾಯಿ ಖರ್ಚು ಮಾಡುವ ಶ್ರೀಮಂತರು ಇದ್ದಾರೆ. ಅಷ್ಟೆ ಕೆಲವು ಶ್ರೀಮಂತರಿಗೆ ಹಣ ಯಾವ ರೀತಿ ಖರ್ಚು ಮಾಡಬೇಕೆಂಬುದೇ ಗೊತ್ತಾಗುತ್ತಿಲ್ಲ. ಅದೆಲ್ಲಾ ಕಪ್ಪುಹಣದ ಶಕ್ತಿ ಎಂಬುದಾಗಿ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದರು. ಪಟ್ಟಭದ್ರ ಹಿತಾಸಕ್ತಿಗಳನ್ನು ದೂರ ಇಡುತ್ತೇವೆಂದು ಇದೇ ಸರ್ಕಾರದವರು ಅನೇಕ ಸಲ ಭಾಷಣ ಮಾಡಿದ್ದಾರೆ. ಆದರೆ ಈ ಪಟ್ಟಭದ್ರಹಿತಾಸಕ್ತಿಗಳಿಗೆ ನಮ್ಮನ್ನು ಮತ್ತು ನಿಮ್ಮನ್ನು ತಿರುಗಿಸುವಂತಹ ಅಸ್ತ್ರ ಇದೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಅದಕ್ಕೆ ಬಲಿಯಾಗದೇ ಇರಬಹುದು. ಆದರೆ ಅವರೊಬ್ಬರೇ ಏನೂ ಮಾಡುವುದಕ್ಕಾಗುವುದಿಲ್ಲ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ ಇಲ್ಲದಿದ್ದರೆ ದಡ ಸೇರುವುದಕ್ಕೆ ಕಷ್ಟವಾಗುತ್ತದೆ. ೫ ವರ್ಷ ಪೂರ್ತಿ ಆ ಜಾಗದಲ್ಲಿರುವುದು ಕಷ್ಟವಾಗುತ್ತದೆ. ಈ ವಿಷಯ ಇರಲಿ, ಈ ಸೀಲಿಂಗ್‌ನ ಒಂದು ಹೊಣೆಗಾರಿಕೆಯನ್ನು ಕೇಂದ್ರದವರ ಮೇಲೆ ಹೊರಿಸುವ ಮುನ್ನ ನಿಮ್ಮ ಸ್ಪಷ್ಟವಾದ ಅಭಿಪ್ರಾಯ ಈ ವಿಷಯದಲ್ಲಿ ಏನಿದೆ ಎಂಬುದನ್ನು ಈ ಸಭೆಗೆ ತಿಳಿಸಬೇಕು. ಈ ಆಸ್ತಿ ಮಿತಿಯ ವಿಚಾರದಲ್ಲಿ ತಾವು ಏನು ತೀರ್ಮಾನಕ್ಕೆ ಬಂದಿದ್ದೀರಿ, ಏನು ನಿರ್ಣಯ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಿ. ಆಸ್ತಿಯ ಮಿತಿಯನ್ನು ಎರಡು ಲಕ್ಷ ಅಥವಾ ಮೂರು ಲಕ್ಷ ಎಂದು ಇಟ್ಟು, ಸಿನಿಮಾ ಥೀಯೇಟರಿಗೆ ಮತ್ತು ಹೋಟೆಲ್‌ಗಳಿಗೆ ರಿಯಾಯಿತಿ ತೋರಿಸಬೇಕು ಎಂಬುದು ತಮ್ಮ ಮನಸ್ಸಿನಲ್ಲಿ ಇದ್ದರೆ, ಅಥವಾ ಇವುಗಳಿಗೂ ಸಹ ರಿಯಾಯಿತಿ ತೋರಿಸಬಾರದು ಎಂಬುದು ತಮ್ಮ ಮನಸ್ಸಿನಲ್ಲಿದ್ದರೆ ಹೇಳಿಬಿಡಿ. ನಿಮ್ಮ ಪರಿಷ್ಕರು ಏನು ತೀರ್ಮಾನ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು.

ಇದರ ಹೊಣೆಗಾರಿಕೆ ಯಾರಿಗೆ ಸೇರಿದ್ದು ? ನಿಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಇಂತಹ ಒಂದು ನಿರ್ಣಯವನ್ನು ಇಲ್ಲಿ ತಂದು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಹೇಳಿದ್ದಾರೆ. ಇದರ ಮೇಲೆ ಸರ್ಕಾರ ತಮ್ಮ ನಿರ್ದಿಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಎಂದು ನಾನು ಇಲ್ಲಿ

ಹೇಳುತ್ತೇನೆ. ನಿಮ್ಮ ನಿರ್ದಿಷ್ಟವಾದ ನಿಲುವು ಏನು ಎನ್ನುವುದನ್ನು ಇಲ್ಲಿ ತಿಳಿಸದೇ ಇರುವುದರಿಂದ ಇಲ್ಲಿ ತಂದಿರುವ ರೆಜಲ್ಯೂಷನನ್ನು ನಾನು ವಿರೋಧ ಮಾಡುತ್ತೇನೆ, ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ.—(ಸಾಗರ) ಮಾನ್ಯ ಅಧ್ಯಕ್ಷರೇ,

ಸಮಾಜವಾದಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂತಹ ಈ ಒಂದು ದಿಸೆಯಲ್ಲಿ ನಮ್ಮ ಅಂಗೀಕಾರಕ್ಕಾಗಿ ತಂದಿರುವ ಈ ನಿರ್ಣಯಕ್ಕೆ ಒಪ್ಪಿಗೆ ಕೊಡುವುದಕ್ಕೆ ಮೊದಲಾಗಿ ಒಂದು ಮಿತಿಯನ್ನು ಹಾಕಬೇಕು ಎನ್ನುವ ದೃಷ್ಟಿ ಇಟ್ಟುಕೊಂಡು ಇವೊತ್ತು ಇಂತಹ ಒಂದು ನಿರ್ಣಯವನ್ನು ಇಲ್ಲಿ ಮಂಡಿಸಲಾಗಿದೆ, ಇದು ಸಂತೋಷದ ವಿಷಯ. ಆದರೆ ನಗರದ ಆಸ್ತಿಯ ಮೇಲೆ ಮಿತಿ ಹಾಕತಕ್ಕ ಕೆಲಸವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟು ರಾಜ್ಯ ಸರಕಾರ ಈ ದಿಸೆಯಲ್ಲಿ ಏನೋ ಒಂದು ರೀತಿಯಾಗಿ ತನ್ನ ತಪ್ಪನ್ನು ಮುಚ್ಚುವ ರೀತಿಯಲ್ಲಿ ತನ್ನ ಜವಾಬ್ದಾರಿಯನ್ನು ಕಳಚಿಕೊಳ್ಳುವುದಕ್ಕಾಗಿ ಮಾಡಿದ್ದಾರೆ, ಅವರು ತಮ್ಮ ತಪ್ಪನ್ನು ಮುಚ್ಚಲು ಏನೋ ಒಂದು ರೀತಿಯಾದ ವಿಶೇಷ ಸಂದರ್ಭವಿರಬೇಕು ಎಂದು ಇಲ್ಲಿ ನಾನು ಹೇಳಬೇಕಾಗಿದೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿ ಮಿತಿ ಹಾಕಬೇಕೆಂಬ ತೀರ್ಮಾನಕ್ಕೆ ಬಂದಿರುವುದರಿಂದ ಆ ಕೆಲಸವನ್ನು ರಾಜ್ಯ ಸರಕಾರವೇ ಅದರ ಪೂರ್ಣ ಹೊಣೆಗಾರಿಕೆಯನ್ನು ಇಟ್ಟು ಕೊಂಡಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶಗಳ ಜನರ ಮೇಲೆ ಮಿತಿಯನ್ನು ಏಕೆ ಹಾಕಬೇಕು, ಅದೇ ರೀತಿ ಇತರ ಕಡೆಗಳಲ್ಲೂ ಮಿತಿ ಹಾಕಬೇಡವೇ ಎಂದು ಈ ಸದನದಲ್ಲಿ ಅನೇಕ ಸದಸ್ಯರು ತಮ್ಮ ತೀರ್ಮಾನವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ, ಇಂದು ಗ್ರಾಮಾಂತರ ಪ್ರದೇಶದಲ್ಲಿರುವ ಜನರ ಬಗ್ಗೆ ಮಿತಿ ಹಾಕುತ್ತಿದ್ದಾರೆಯೋ ಹೊರತು ಪಟ್ಟಣಗಳಲ್ಲಿರುವವರ ಬಗ್ಗೆ ಮಿತಿ ಹಾಕದೆ ಇದನ್ನು ಮಾಡಲು ಏಕೆ ಪ್ರಯತ್ನ ಮಾಡುತ್ತಾರೋ ನಮಗೆ ಗೊತ್ತಾಗುತ್ತಿಲ್ಲ. ನನ್ನ ಮಿತ್ರರು ಈಗಾಗಲೇ ವ್ಯಕ್ತಮಾಡಿದ ಹಾಗೆ ಇದರಲ್ಲಿರತಕ್ಕ ಅನೇಕ ಸನ್ನಿವೇಶಗಳನ್ನು ನಾವು ನೋಡಿದ್ದೇವೆ. ಇವೊತ್ತು, ಈ ಸದನದಲ್ಲಿ ರಾಜ್ಯದ ಜನರಿಂದ ಚುನಾಯಿಸಲ್ಪಟ್ಟಿರುವ ಪ್ರತಿನಿಧಿಗಳು ಇಲ್ಲಿದ್ದಾರೆ ಮತ್ತು ನಮ್ಮ ರಾಜ್ಯದ ಜನರನ್ನು ಪ್ರತಿನಿಧಿಸತಕ್ಕ ಸದನ ಕೂಡ ಇದಾಗಿದೆ. ಇಲ್ಲಿ ಗ್ರಾಮಾಂತರ ಪ್ರದೇಶಗಳ ಆಸ್ತಿಗಳ ಮೇಲೆ ಮಿತಿ ಹಾಕತಕ್ಕ ತೀರ್ಮಾನವನ್ನು ನಾವೇ ಮಾಡುವುದಕ್ಕೆ ಈಗಾಗಲೇ ಮುಂದುವರಿದಿದ್ದೇವೆ, ಆದರೆ ನಗರ ಪ್ರದೇಶಗಳ ಮೇಲೆ ಮಿತಿ ಮಾಡುವ ಜವಾಬ್ದಾರಿಗಳನ್ನು ವಹಿಸಲು ಏತಕ್ಕೇ ಹಿಂದೇಟು ಹಾಕಿದಿರಿ, ಇದನ್ನು ಕೇಂದ್ರ ಸರಕಾರಕ್ಕೆ ಏತಕ್ಕಾಗಿ ವಹಿಸಬೇಕಾಗಿತ್ತು, ರಾಜ್ಯದ ಜನರು ಯಾರೂ ರಾಜ್ಯ ಸರಕಾರ ಈ ಕೆಲಸವನ್ನು ಮಾಡಬಾರದು ಕೇಂದ್ರ ಸರಕಾರವೇ ಮಾಡಬೇಕು ಎನ್ನುವ ಅಭಿಪ್ರಾಯ ಹೇಳಲಿಲ್ಲ. ಅಥವಾ ರಾಜ್ಯ ಸರಕಾರ ಭೂಮಿಯ ಮೇಲೆ ಮಿತಿ ಹಾಕತಕ್ಕ ಸಂದರ್ಭದಲ್ಲಿ ಇದಕ್ಕೆ ಮಾತ್ರ ಮಿತಿ ಹಾಕಿ ನಗರ ಆಸ್ತಿಗಳಮೇಲೆ ಮಿತಿ ಹಾಕುವುದು ಬೇಡ ಎಂದು ಯಾರೂ ಹೇಳಲಿಲ್ಲ. ಈ ಕೆಲಸವನ್ನು ಇವರೇ ಕೇಂದ್ರ ಸರಕಾರಕ್ಕೆ ವಹಿಸಿದ ಮೇಲೆ ನಿಮ್ಮ ಜವಾಬಾರಿಯನ್ನು ಅವರಿಗೆ ವಹಿಸಿ ಅವರೇ ನಿಮ್ಮ ಎಲ್ಲ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕೆಂದು ಅವರಿಗೇನಾದರೂ ಹೇಳಲಾಗಿತ್ತೇ, ಇದರಲ್ಲಿ ನನಗೆ ಅನುಮಾನ ಬರುತ್ತಿರುವುದು ನಗರ ಪ್ರದೇಶಗಳಲ್ಲಿ ಇರುವ ಜನರಿಂದ ಸಿಕ್ಕತಕ್ಕ ಆರ್ಥಿಕ ಶಕ್ತಿ ಗ್ರಾಮಾಂತರ ಪ್ರದೇಶಗಳಲ್ಲಿ ಸಿಗುವುದಿಲ್ಲ. ಹಾಗಾಗಿ ಈ ಹೊತ್ತು ರಜ್ಯದ ಸಂಪತ್ತು ಅಥವಾ ರಾಷ್ಟ್ರದ ಹೆಚ್ಚು ಭಾಗದ ಆದಾಯ ಎಂದರೆ ಸುಮಾರು ೮ ಪರ್ಸೆಂಟ್ ಆದಾಯ ಪ್ರತಿ ವರ್ಷವೂ ಕೂಡ ನಗರ ಪ್ರದೇಶಗಳಲ್ಲಿ ಆಗುತ್ತಿದೆ. ಆದರೆ ಇಷ್ಟು ದೊಡ್ಡ ಸಂಪತ್ತು ಇರತಕ್ಕ ನಗರ ಆಸ್ತಿ ಮೇಲೆ ಮಿತಿ ಹಾಕುವಂಥ, ನಮಗೆ ಇರಬೇಕಾದ ಮೂಲ ಭೂತವಾದ ಹಕ್ಕನ್ನು ಕಳೆದುಕೊಳ್ಳುತ್ತಿದ್ದೇವೆ, ಕಳೆದುಕೊಳ್ಳತಕ್ಕ ಪ್ರಸಂಗಕ್ಕೆ ನಾವು ಬಂದು ಮುಟ್ಟಿದ್ದೇವೆ.

4-30 P.M.

ಮಾನ್ಯ ಸದಸ್ಯರಾದ ಕೆಂಚೇಗೌಡ, ಶ್ರೀ ವೀರಪ್ಪಗೌಡ ಇವರುಗಳು ಬಹಳ ಅನುಕಂಪದಿಂದ ಮಾತನಾಡಿ ನಮ್ಮ ಜಮೀನಿನ ಮೇಲೆ ಸೀಲಿಂಗ್ ತರುತ್ತಿದ್ದೀರಿ, ನಗರ ಆಸ್ತಿ ಮೇಲೆ ತರುತ್ತಿಲ್ಲ, ಬಹಳ ಅನ್ಯಾಯವಾಗುತ್ತಿದೆ ಎನ್ನುವ ಮಾತನ್ನು ಹೇಳಿದರು. ನಾನು ಅವರಿಗೆ ಹೇಳುವುದು ಇಷ್ಟೆ. ನಾನು ಆ ಸಂದರ್ಭದಲ್ಲಿ ಮಾತನಾಡುವಾಗ ನಗರ ಆಸ್ತಿ ಮೇಲೆ ಹಾಕತಕ್ಕ ಮಿತಿಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ ಅಪಾರ್ಥ ಮಾಡಿಕೊಳ್ಳುತ್ತಾರೆನ್ನುವ ಉದ್ದೇಶದಿಂದ ಮಾತನಾಡುವುದಕ್ಕೆ ಹೋಗಲಿಲ್ಲ. ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ನಾವು ನಮ್ಮ ಆಸ್ತಿ ಮೇಲೆ ಮಿತಿಯನ್ನು ಹಾಕಿಕೊಂಡರೆ ನಾವು ನೈತಿಕವಾಗಿ

(ಶ್ರೀ ಕಾಗೋಡು ತಿಮ್ಮಪ್ಪ)

ನಗರ ಆಸ್ತಿ ಮೇಲೆಯೂ ಮಿತಿಯನ್ನು ಹಾಕಬೇಕು ಎಂದು ಹೇಳತಕ್ಕ ಹಕ್ಕನ್ನು ಪಡೆಯುತ್ತೇವೆ. ಆ ಉದ್ದೇಶದಿಂದಲೇ ಗ್ರಾಮಾಂತರ ಪ್ರದೇಶಗಳಲ್ಲಿ ಜನರು ತಮ್ಮ ಆಸ್ತಿ ಮೇಲೆ ಮಿತಿಯನ್ನು ಹಾಕಿಕೊಳ್ಳುವುದಕ್ಕೆ ಒಪ್ಪಿಸಿಕೊಳ್ಳಬೇಕು, ಹಾಗೆ ಒಪ್ಪಿಕೊಳ್ಳುವಾಗ ಯಾವ ಒಂದು ಮೌಲ್ಯವನ್ನು ಇಟ್ಟುಕೊಂಡು ಆ ಆಧಾರದಮೇಲೆ ನಮ್ಮ ಗ್ರಾಮಾಂತರ ಪ್ರದೇಶದ ಆಸ್ತಿಯ ಮೇಲೆ ಮಿತಿ ಹಾಕುತ್ತೇವೆ ಅದೇ ಮೌಲ್ಯವನ್ನು ಆಧಾರವಾಗಿಟ್ಟುಕೊಂಡು ನಗರ ಪ್ರದೇಶದ ಆಸ್ತಿಯ ಮೇಲೆಯೂ ಮಿತಿಯನ್ನು ಹೇರತಕ್ಕ ಕೆಲಸವಾಗಬೇಕು. ಅಲ್ಲಿಯೇ ಇರುವುದು. ಆರ್ಥಿಕವಾಗಿ ಸಮಾನತೆಯನ್ನು ತರತಕ್ಕ ಮೂಲ ಉದ್ದೇಶವನ್ನು ಇಟ್ಟುಕೊಂಡು ಆಸ್ತಿ ಮೇಲೆ ಮಿತಿಯನ್ನು ಹಾಕತಕ್ಕ ಕೆಲಸಕ್ಕೆ ಕೈ ಹಾಕಿದ್ದೇವೆ. ಸಮಾಜವಾದ ಕಾರ್ಯಕ್ರಮವಾದರೂ ಕೂಡ, ಸಮಾಜವಾದ ತತ್ವದ ಉದ್ದೇಶವಾದರೂ ಕೂಡ ಆರ್ಥಿಕ ಕ್ಷೇತ್ರದಲ್ಲಿ ಸಮಾನತೆಯನ್ನು ಸಾಧಿಸಬೇಕು ಎನ್ನುವ ಮೂಲಭೂತವಾದ ಗುರಿಯೇ ಆಗಿದೆ. ಅದನ್ನು ಸಾಧಿಸಬೇಕಾದರೆ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಮೌಲ್ಯವನ್ನು ಆಧಾರವಾಗಿಟ್ಟುಕೊಂಡು ಒಂದು ಮಿತಿಯನ್ನು ವಿಧಿಸುತ್ತೇವೆ ಅದೇ ಮಿತಿಯನ್ನು ಆಧಾರವಾಗಿಟ್ಟುಕೊಂಡು ನಾವು ನಗರ ಪ್ರದೇಶದ ಆಸ್ತಿಯ ಮಿತಿಯನ್ನು ಹಾಕಬೇಕು. ಈಗ ಇರತಕ್ಕ ಮಸೂದೆಯ ಪ್ರಕಾರ ಹತ್ತು ಎಕರೆಯ ಮಿತಿಯನ್ನು ಇಟ್ಟುಕೊಂಡಿದ್ದೇವೆ. ಆ ಜಮೀನನ್ನು ಮಾರಾಟ ಮಾಡಿದರೆ ಹೆಚ್ಚು ಎಂದರೆ ಒಂದು ಲಕ್ಷ ರೂಪಾಯಿ ಬೆಲೆಯನ್ನು ಕಾಣಬಹುದು. ಮಂಡ್ಯ ಅಥವಾ ಮೈಸೂರು ಜಿಲ್ಲೆಯಲ್ಲಿ, ಎರಡು ಬೆಳೆ ಬರತಕ್ಕ ಪ್ರದೇಶದಂದು ಒಂದು ಎಕರೆಗೆ ೨೫ ೩೦ ಸಾವಿರ ಆಗುತ್ತದೆಂದು ಹೇಳುತ್ತಾರೆ. ಸರ್ವೇಸಾಧಾರಣವಾಗಿ ಒಂದು ೧೦ ಸಾವಿರ ರೂಪಾಯಿ ಎಂದು ಇಟ್ಟುಕೊಳ್ಳೋಣ. ಅದರ ಮೇಲೆ ಲೆಕ್ಕ ಹಾಕಿದರೆ ಈ ಹೊತ್ತು ಹತ್ತು ಎಕರೆ ಬೆಲೆ ಒಂದು ಲಕ್ಷ ರೂಪಾಯಿ ಆಗಬಹುದು. ಅದನ್ನು ನಾವು ಒಪ್ಪಿಕೊಳ್ಳೋಣ. ಗ್ರಾಮಾಂತರ ಪ್ರದೇಶದಿಂದ ಪ್ರತಿನಿಧಿಸತಕ್ಕ ಜನರು ಶೇಕಡ ೮೦ ರಷ್ಟು ಇದ್ದಾರೆ. ಅವರ ಪ್ರತಿನಿಧಿಗಳು ಕೂಡ ೮೦ ರಷ್ಟು ಇದ್ದಾರೆ. ನಾವು ನಮ್ಮ ಮೇಲೆ ಒಂದು ಮಿತಿಯನ್ನು ಹೇರಿಕೊಂಡರೆ, ಈ ರಾಷ್ಟ್ರದಲ್ಲಿ ಸವಾಲು ಹಾಕಿ ಹೇಳಬಹುದು, ಈ ಹೊತ್ತು ನಾವು ಈ ಮಿತಿಯನ್ನು ಒಪ್ಪಿಕೊಂಡಿದ್ದೇವೆ, ನಮಗೆ ಯಾವ ಆಧಾರದ ಮೇಲೆ ಮಿತಿ ಹಾಕಲಾಗಿದೆಯೋ ಅದೇ ಪ್ರಕಾರವಾಗಿ ನಗರ ಪ್ರದೇಶಗಳಲ್ಲಿರುವ ಆಸ್ತಿಯ ಮೇಲೆಯೂ ಮಿತಿಯನ್ನು ಹಾಕಿ ಎಂದು ಸವಾಲು ಹಾಕಿ ಹೇಳಬಹುದು, ಡಿಕ್ಟೇಟ್ ಮಾಡಬಹುದು. ಅದು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಲ್ಲಿಯೂ ಇದೆ, ಅವರ ಪ್ರತಿನಿಧಿಗಳಾದ ನಮ್ಮ ಮೇಲೂ ಇದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹಾಕುವ ಮಿತಿಯು ಜಮೀನಿನ ಮೌಲ್ಯ ಎಷ್ಟಾಗುತ್ತದೆಯೋ ಅದೇ ಪ್ರಮಾಣದಲ್ಲಿ ನಗರ ಪ್ರದೇಶಗಳಲ್ಲಿ ಮಿತಿಯನ್ನು ಹಾಕುವುದಕ್ಕೆ ವಿಚಾರ ನಡೆಯುತ್ತಿಲ್ಲ. ಆ ಪ್ರಕಾರವಾಗಿ ನಗರ ಪ್ರದೇಶದ ಆಸ್ತಿ ಮೇಲೆ ಮಿತಿಯನ್ನು ಹಾಕುವಂಥಾ ಧೋರಣೆಯನ್ನು ತಾಳಿಲ್ಲ. ನಗರ ಪ್ರದೇಶಗಳಲ್ಲಿರುವವರಿಗೆ ಎರಡು ಲಕ್ಷ ರೂಪಾಯಿ ಮಿತಿ ಇಡೋಣ, ಐದು ಲಕ್ಷ ರೂಪಾಯಿ ಮಿತಿ ಇಡೋಣ ಎಂದು ಅವರಿಗೆ ಹೆಚ್ಚು ಮಿತಿಯನ್ನು ಕೊಡಬೇಕೆಂದು ಹೇಳುತ್ತಾರೆ. ಈ ಹೊತ್ತು ನಮ್ಮ ಆಸ್ತಿ ಮೇಲೆ ಮಿತಿಯನ್ನು ಹಾಕಬೇಕಾದ ಸಂದರ್ಭದಲ್ಲಿ ಯಾರೂ ಮಾತನಾಡುವುದಿಲ್ಲ, ವಿಚಾರ ಮಾಡುವುದಿಲ್ಲ. ನಗರ ಪ್ರದೇಶದ ಆಸ್ತಿ ಮೇಲೆ ಮಿತಿ ಹಾಕಬೇಕಾಗುತ್ತದೆ. ಈ ಹೊತ್ತಿನ ದಿವಸ ಒಂದು ರಾಜ್ಯದಲ್ಲಿ, ಒಂದು ಕ್ಷೇತ್ರದಲ್ಲಿ ಮಿತಿಯನ್ನು ಯಾವ ಸಿದ್ಧಾಂತದ ಆಧಾರದ ಮೇಲೆ ಹಾಕುತ್ತೇವೆಯೋ ಅದೇ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ಕಾನೂನನ್ನು ಮಾಡಬೇಕಾಗಿದೆ. ಜಮೀನಿನ ಮೇಲೆ ಮಿತಿ ಹಾಕುವ ಸಂಬಂಧದಲ್ಲಿ ಸಾಕಷ್ಟು ವಿಪುಲವಾಗಿ ಚರ್ಚೆ ಮಾಡಿದ್ದೇವೆ. ಜಮೀನಿನ ಮೇಲೆ ಮಿತಿ ಹಾಕುವಂಥ ಕಾನೂನನ್ನು ನಮ್ಮ ರಾಜ್ಯದಲ್ಲಿಯೇ ಮಾಡಿರುವಾಗ ನಗರ ಪ್ರದೇಶಗಳ ಆಸ್ತಿಯ ಮೇಲೆ ಮಿತಿಯನ್ನು ಹಾಕುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ಅವಶ್ಯಕತೆ ಏನು ಎಂದು ಕೇಳುತ್ತೇನೆ,

SRI K. PUTTASWAMY. Why did not the hon. Member raise this matter while discussing the Land Reforms Bill?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಯಾವಾಗ ಗ್ರಾಮಾಂತರ ಪ್ರದೇಶದಲ್ಲಿ ೧೦ ಎಕರೆ ಮಿತಿ ಎಂದು ಹೇಳುವಾಗ, ಆ ಹತ್ತು ಎಕರೆ ಮಿತಿಯನ್ನು ಹಾಕಿದ ಮೇಲೆ ಆ ಹೊತ್ತು ಮಾರುಕಟ್ಟೆಯ ಬೆಲೆ ಎಷ್ಟು ಎಂದು ಸಿಕ್ಕುತ್ತದೆ. ಮಿತಿಯಲ್ಲಿ ಬರುವ ಆಸ್ತಿಗೆ ಒಂದು ಬೆಲೆಯನ್ನು ಕಟ್ಟಬೇಕು. ನಾಳೆ ನಗರ ಆಸ್ತಿಯ ಮೇಲೆ ಮಿತಿಯನ್ನು ಹಾಕಿದ ಮೇಲೆ ಅದರ ಮಿತಿಯೊಳಗೆ ಬರತಕ್ಕ ಆಸ್ತಿಯ ಬೆಲೆಯೂ ಒಂದೇ ಆಗಿರಬೇಕು.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಸದಸ್ಯರ ವಾದ ಹಳ್ಳಿಗಳಲ್ಲಿ ೧೦ ಸ್ಟ್ಯಾಂಡರ್ಡ್ ಎಕರೆಗೆ

ಎಷ್ಟು ಬೆಲೆ ಆಗುತ್ತದೆಯೋ ನಗರ ಪ್ರದೇಶಗಳಲ್ಲಿನ ಆಸ್ತಿಗೂ ಅದೇ ಬೆಲೆಯ ಮಿತಿಯನ್ನು ಹಾಕಬೇಕು ಎಂದು ಇದೆ. ಆದರೆ ಹಳ್ಳಿಗಳಲ್ಲಿರುವ ಜಮೀನುಗಳಲ್ಲಿ ಎಷ್ಟು ಉತ್ಪತ್ತಿ ಬರುತ್ತದೆಯೋ ಆ ಆಧಾರದಮೇಲೆ ಮಿತಿಯನ್ನು ಹಾಕಬೇಕಾಗುತ್ತದೆ. ದೊಡ್ಡ ದೊಡ್ಡ ನಗರಗಳಲ್ಲಿ ಐದು ಲಕ್ಷ ರೂಪಾಯಿ ಆಸ್ತಿ ಇರಬಹುದು ಆದರೆ ಅದರಲ್ಲಿ ೧೦ ಸ್ಟಾಂಡರ್ಡ್ ಎಕರೆಯಲ್ಲಿ ಬರತಕ್ಕ ಉತ್ಪತ್ತಿ ಎಷ್ಟಿದೆ ಅಷ್ಟು ಬರುವುದಿಲ್ಲ. ಅದನ್ನೂ ಗಣನೆಗೆ ತೆಗೆದುಕೊಂಡು ಉತ್ಪತ್ತಿಯ ಮೇಲೆ ಮಿತಿಯನ್ನು ಗೊತ್ತುಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಗ್ರಾಮಾಂತರ ಪ್ರದೇಶದ ಆಸ್ತಿಯಮೇಲೆ ಮಿತಿಯನ್ನು ತರತಕ್ಕ ಸಂದರ್ಭದಲ್ಲಿ ಬಿರ್ಲಾ ಅವರು ಕಟ್ಟಡವನ್ನು ಕಟ್ಟಿರುವುದರ ಮೇಲೆ ಮಿತಿಯನ್ನು ತರುತ್ತೇವೆಂದು ಹೇಳಿದರೆ ಅವಾಗ ಯಾರು ಯಾವ ತರಹ ಪ್ರಭಾವವನ್ನು ತರುತ್ತಾರೆ ಎನ್ನುವುದು ನಮಗೆ ಗೊತ್ತಿದೆ. ಬಿರ್ಲಾ ಅಂಥವರ ಆಸ್ತಿ ಮೇಲೆ ನಮ್ಮ ಸರ್ಕಾರಗಳು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯ ಸರ್ಕಾರದ ಅನೇಕ ಮಂತ್ರಿಗಳು ಅವರನ್ನು ನೋಡುವುದಕ್ಕೆ ಹೋಗುತ್ತಾರೆ. ಅವರು ವಿಧಾನ ಸೌಧಕ್ಕೆ ಬಂದು ಸಾಮಾನ್ಯವಾಗಿ ಮುಖ್ಯಮಂತ್ರಿಗಳು ಅಥವಾ ರಾಜ್ಯದ ಕೈಗಾರಿಕಾ ಮಂತ್ರಿಗಳನ್ನು ನೋಡುವುದಿಲ್ಲ, ಅವರು ಹಾಗೆ ನೋಡುವುದಕ್ಕೆ ಬರುವುದೂ ಇಲ್ಲ. ಅವರನ್ನೇ ನೋಡುವುದಕ್ಕೆ ಹೋಗುವ ಮಂತ್ರಿಗಳಿದ್ದಾರೆ. ಹಿಂದಿನ ಸರ್ಕಾರದ ಮಂತ್ರಿಗಳು ಬಿರ್ಲಾ ಅವರು ಹೆಸರುಘಟ್ಟಕ್ಕೆ ಬಂದಿದ್ದಾಗ್ಗೆ ಅವರನ್ನು ನೋಡಲು ಹೋದರಂತೆ. ಇವರು ಹೋಗುವುದು ಸ್ವಲ್ಪ ನಿಧಾನವಾಗಿ, ನೀವು ಬರುವುದು ಒಂದು ನಿಮಿಷ ತಡವಾಯಿತು, ಅವರು ಹೊರಟುಹೋದರು, ಇಂಟರ್‌ವ್ಯೂ ಸಿಕ್ಕುವುದಿಲ್ಲ ಎಂದು ವಾಪಸು ಕಳುಹಿಸಿದರಂತೆ, ಅಂಥವರ ಆಸ್ತಿಮೇಲೆ ಮಿತಿಯನ್ನು ಹಾಕುವಂಥ, ಅವರನ್ನು ಹಿಡಿದು ಕೇಳತಕ್ಕ, ಅವರನ್ನು ಪ್ರಶ್ನೆ ಮಾಡತಕ್ಕ ಶಕ್ತಿ ರಾಜ್ಯ ಸರ್ಕಾರಕ್ಕೆ ಇರುವುದಿಲ್ಲ. ಅವರು ಕೇಂದ್ರ ಸರ್ಕಾರದ ಜೊತೆ ಚೆನ್ನಾಗಿರುತ್ತಾರೆ. ಆದ್ದರಿಂದ ರಾಜ್ಯ ಸರ್ಕಾರಗಳಿಗೆ ಈ ಅಧಿಕಾರವನ್ನು ಕೊಟ್ಟರೆ ಎಲ್ಲಿಯಾದರೂ ಬಿರ್ಲಾ ಅಂಥವರ ಮೇಲೆ ಕೈ ಹಾಕಿಯಾರು, ರಾಜ್ಯದಲ್ಲಿರುವ ಕೆಲವರ ಮೇಲೆ ಕೈ ಹಾಕಿಬಿಟ್ಟಾರು, ಈ ದೊಡ್ಡ ಕೆಲಸವನ್ನು ರಾಜ್ಯ ಸರ್ಕಾರಕ್ಕೆ ಕೊಡಬಾರದು, ಕೇಂದ್ರ ಸರ್ಕಾರದ ಮಿತ್ರರ ಮೇಲೆ ಅವರ ಆಸ್ತಿಯ ಮೇಲೆ ಎಲ್ಲಿಯಾದರೂ ಕೈ ಹಾಕಿಯಾರು, ಅದರಿಂದ ನಮ್ಮ ಅಸ್ತಿತ್ವಕ್ಕೇ ತೊಂದರೆ ಬಂದೀತು ಎನ್ನುವ ಕಾರಣದಿಂದ ಕೇಂದ್ರ ಸರ್ಕಾರವೇ ನಗರ ಆಸ್ತಿಮಿತಿಗೆ ಸಂಬಂಧಪಟ್ಟ ಕಾನೂನನ್ನು ಮಾಡುವ ಅಧಿಕಾರವನ್ನು ಇಟ್ಟುಕೊಂಡಿದ್ದಾರೆ. ೮೦ ಪರ್ಸೆಂಟ್ ಆದಾಯ ಬರತಕ್ಕ ಆಸ್ತಿ ಇರತಕ್ಕ ಪ್ರದೇಶಗಳಲ್ಲ ಮಿತಿಯನ್ನು ಹಾಕುವ ಅಧಿಕಾರವನ್ನು ಕೇಂದ್ರ ಸರ್ಕಾರದವರೇ ಇಟ್ಟುಕೊಂಡು ಕೇವಲ ಗ್ರಾಮಾಂತರ ಪ್ರದೇಶಗಳಲ್ಲಿನ ಆಸ್ತಿಯ ಮೇಲೆ ಮಿತಿ ಹಾಕುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಕೊಡತಕ್ಕ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ನಮ್ಮ ಸರ್ಕಾರದವರು ಕೂಡ ಅವರ ತಾಳಕ್ಕೆ ತಕ್ಕಹಾಗೆ ಕುಣಿಯುವುದಕ್ಕೆ ಶುರು ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ಹೊತ್ತಿನ ದಿವಸ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದೊಂದಿಗೆ ಧೈರ್ಯವಾಗಿ ನಿಂತು ಹೇಳುವ ಎದೆಗಾರಿಕೆ ಇಲ್ಲದೇ ಇರುವುದರಿಂದ ರಾಜ್ಯ ಸರ್ಕಾರ ಇದನ್ನು ಒಪ್ಪಿಕೊಳ್ಳುವ ಪರಿಸ್ಥಿತಿಗೆ ಬಂದಿದೆ. ಈ ಹೊತ್ತು ನಗರ ಪ್ರದೇಶದಲ್ಲಿ ಈ ಒಂದು ಮಿತಿಯನ್ನು ಹಾಕತಕ್ಕಂಥ ಸಂದರ್ಭದಲ್ಲಿ ನಗರ ಪ್ರದೇಶಗಲ್ಲಿರುವ ಬಂಡವಾಳ ಶಾಹಿಗಳು ದೊಡ್ಡ ದೊಡ್ಡ ಆಸ್ತಿಯನ್ನು ಹೊಂದಿರತಕ್ಕಂಥಾವರು ಕೇಂದ್ರ ಸರ್ಕಾರದಲ್ಲಿ ಯಾವ ಪ್ರಭಾವವನ್ನಾದರೂ ಬೀರುವುದಕ್ಕೆ ಅವರಿಗೆ ಶಕ್ತಿ ಇದೆ, ಅದ್ದರಿಂದ ಈ ಹೊತ್ತು ಪಾರ್ಲಿಮೆಂಟ್‌ನಲ್ಲಿಗತಕ್ಕಂಥ ಅನೇಕ ಜನ ಸದಸ್ಯರೂ ಕೂಡ ಈ ಆಸಿ ವಂತರ ಮತ್ತು ಬಂಡವಾಳಶಾಹಿಗಳ ಪ್ರಭಾವಕ್ಕೆ ಒಳಗಾಗಲು ಸಾಧ್ಯ ಇದೆ. ಇಂಥಾ ಒಂದು ದೊಡ್ಡ ಜವಾಬ್ದಾರಿಯನ್ನು ಅವರೇ ಉಳಿಸಿಕೊಂಡು ನಗರದಲ್ಲಿರತಕ್ಕಂಥ ಬಂಡವಾಳಶಾಹಿಗಳಿಗೆ ಕೊಡುವುದಕ್ಕೆ ಹೊತ್ತು ಇಂತಹ ಒಂದು ಕಾನೂನನ್ನು ರಾಜ್ಯ ಸರ್ಕಾರದಿಂದ ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ವಿಶಾದದಿಂದ ಹೇಳುತ್ತೇನೆ. ಈ ಹೊತ್ತು ಇಂಥಾ ಒಂದು ಅಧಿಕಾರವನ್ನು ರಾಜ್ಯ ಸರ್ಕಾರವೇ ಇಟ್ಟುಕೊಳ್ಳ ಬೇಕಾಗಿತ್ತು ಎಂದು ನಮ್ಮ ಮೂಲ ಧ್ಯೇಯ. ಉದಾಹರಣೆಗೆ ನಮ್ಮ ಸದನದಲ್ಲಿ ಲೆಕ್ಕ ಹಾಕುವುದಾದರೆ ನಾವೆಲ್ಲಾ ಗ್ರಾಮಾಂತರ ಪ್ರದೇಶದಿಂದ ಬಂದವರು. ಈಗ ನಮ್ಮ ದೇಶದ ಗ್ರಾಮಾಂತರ ಪ್ರದೇಶದ ಆಸ್ತಿಯ ಮೇಲೆ ಯಾವ ರೀತಿಯಾಗಿ ಒಂದು ಮಿತಿ ಹಾಕಬೇಕೆಂದಿದ್ದೀರೋ ಅದೇ ರೀತಿ ನಗರಾಸ್ತಿಯ ಮೇಲೆ ಹಾಕುತ್ತೇವೆ ಎಂದು ಹೇಳಿ. ಕೇಂದ್ರ ಸರ್ಕಾರದವರೇ ಇರಲಿ ಹೇಳೋಣ. ಇಂಥ ಒಂದು ಅಧಿಕಾರವನ್ನು ರಾಜ್ಯ ಸರ್ಕಾರ ಕಳೆದು ಕೊಳ್ಳುವುದು ಸರಿಯಲ್ಲ ಈ ಹೊತ್ತು ಕಂದಾಯ ಮಂತ್ರಿಗಳು ತಂದಿರತಕ್ಕಂಥ ಈ ನಿರ್ಣಯಕ್ಕೆ ನಾವು ಒಪ್ಪಿಕೊಳ್ಳುವುದಾದರೆ ಈ ಸದನದಲ್ಲಿ ಅವರು ಹೇಳಿದ ಕೆಲಸ ನಾವು ಒಪ್ಪಿಕೊಳ್ಳುವುದಕ್ಕೆ ಕುಳಿತಿದ್ದೇವೆ ಎನ್ನುವ ಹಾಗೆ ಆಗುತ್ತದೆ. ಅಂದರೆ ನಾವು ಪೋಸ್ಟ್‌ಮನ್ ಕೆಲಸಮಾಡಿದ ಹಾಗೆ ಆಗುತ್ತದೆ. ಇನ್ನು ಇದರಲ್ಲಿ ನಿಷ್ಠೂರ ಏತಕ್ಕೆ ಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ವೀರಪ್ಪಗೌಡರು ಚುನಾವಣೆಗೆ ಲಕ್ಷ ಗಟ್ಟಲೆ ಹಣ ಕೊಡುವುದಿಲ್ಲ; ಬಿರ್ಲಾ ಅಂತಹವರು ಕೊಡುತ್ತಾರೆ. ಅವರು ಒಂದು ಲಕ್ಷವೇ ಅಲ್ಲ ೧೦ ಲಕ್ಷ ಕೊಟ್ಟರೂ

(ಶ್ರೀ ಕಾಗೋಡು ತಿಮ್ಮಪ್ಪ)

ಅವೆಲ್ಲಾ ಪತ್ರಿಕೆಯಲ್ಲಿ ಬರುತ್ತದೆ. ಅದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಟಾಟಾ ಮತ್ತು ಬಿರ್ಲಾರವರು ಒಂದೊಂದು ರಾಜಕೀಯ ಪಕ್ಷಕ್ಕೆ ಎಷ್ಟೆಷ್ಟು ಕೊಟ್ಟಿದ್ದಾರೆ ಅವೆಲ್ಲಾ ಸರ್ಕಾರ ಕೊಟ್ಟಿರತಕ್ಕಂಥ ಲೆಕ್ಕದಲ್ಲೇ ಇದೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಟಾಟಾ ಮತ್ತು ಬಿರ್ಲಾರವರು ಲಕ್ಷಗಟ್ಟಲೆ ಒಂದೊಂದು ರಾಜಕೀಯ ಪಕ್ಷಕ್ಕೆ ಕೊಟ್ಟಿರಬಹುದು. ಯಾವಕಾರಣಕ್ಕಾಗಿ ಕೊಟ್ಟಿದ್ದಾರೆ ಎನ್ನುವುದನ್ನು ತಿಳಿಯಬೇಕು. ಲೋಕಸಭಾ ಸದಸ್ಯರಾಗಿದ್ದ ಶ್ರೀಮಾನ್ ಎಸ್. ಎಂ ಕೃಷ್ಣ ಅವರನ್ನು ಕೇಳಿದರೆ ಗೊತ್ತಾಗುತ್ತದೆ. ಈ ಹೊತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಒಬ್ಬ ದೊಡ್ಡ ಜಮೀನ್ದಾರನೂ ಕೂಡ ರಾಜಕೀಯ ಪಕ್ಷಕ್ಕೆ ಇಷ್ಟು ದುಡ್ಡು ಕೊಡುವುದಕ್ಕಾಗುವುದಿಲ್ಲ. ನೀವು ಗ್ರಾಮಾಂತರ ಪ್ರದೇಶದ ಆಸ್ತಿ ಮೇಲೆ ಮಿತಿಯನ್ನು ಹಾಕುವಾಗ ಎಷ್ಟು ಆಸಕ್ತಿಯನ್ನು ವಹಿಸಿದರೋ ಅಷ್ಟೇ ಆಸಕ್ತಿಯನ್ನು ನಗರಾಸ್ತಿಯಮೇಲೆ ಹಾಕುವಂಥ ಒಂದು ಅಧಿಕಾದ ಮೇಲೂ ವಹಿಸಬೇಕಾಗಿತ್ತು. ಈ ನಿರ್ಣಯ ನಾವು ಒಪ್ಪುವುದಾದರೆ ಇದರ ಸಂಪೂರ್ಣ ಅಧಿಕಾರವನ್ನು ಕಳೆದುಕೊಂಡಂತಾಗುತ್ತದೆ. ನೀವು ಈ ಕೆಲಸವನ್ನು ಮಾಡಬೇಡಿ. ನಮ್ಮ ರಾಜ್ಯದ ಜನತೆಯ ಮುಂದೆ ನಾವು ಸದಸ್ಯರಾಗಿ ಈ ಮಾತನ್ನು ಹೇಳುವುದಕ್ಕೆ ತಯಾರಿಲ್ಲ ನಮಗಿರತಕ್ಕಂಥ ಅಭಿಪ್ರಾಯ ಸ್ವಾತಂತ್ರ್ಯವನ್ನು ಚಲಾಯಿಸುವುದಕ್ಕೆ ರಾಜ್ಯಾಂಗದ ಪ್ರಕಾರ ಇರತಕ್ಕಂಥ ಹಕ್ಕನ್ನು ನಾವು ಉಪಯೋಗಿಸಿಕೊಂಡು ಸಮಾನತೆಯನ್ನು ಸಾಧಿಸುವ ದೃಷ್ಟಿಯಿಂದ ಈ ಒಂದು ಮಿತಿಯನ್ನು ಹಾಕತಕ್ಕಂಥ ಸಾರ್ವಭೌಮದ ಅಧಿಕಾರದ ಹಕ್ಕು ರಾಜ್ಯಸರ್ಕಾರಕ್ಕೆ, ಈ ಸಭೆಗೆ ಇದೆ. ಇದನ್ನು ನಾವು ಉಪಯೋಗಿಸುವುದಕ್ಕೆ ಬದಲಾಗಿ ತ್ಯಾಗ ಮಾಡಿ ಕೇಂದ್ರ ಸರ್ಕಾರಕ್ಕೆ ಕೊಟ್ಟು ಕೈಮುಗಿಯುವ ಕೆಲಸಕ್ಕೆ ಹೋಗಬೇಡಿ. ನಮಗಿರತಕ್ಕಂಥ ಸಾರ್ವಭೌಮ ಹಕ್ಕನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟರೆ ನಾವು ಇಲ್ಲಿ ಕೂತುಕೊಳ್ಳುವುದು ಏತಕ್ಕೆ ? ಮಾನ್ಯ ಕಂದಾಯ ಮಂತ್ರಿಗಳಿಗೆ ನಾನು ಕೇಳಿಕೊಳ್ಳುತ್ತೇನೆ ನೀವು ಈಗ ಒಂದು ನಿರ್ಣಯವನ್ನು ಏನು ಮಂಡಿಸಿದಿರೋ ಹಾಗೆಯೇ ನಗರಾಸ್ತಿಯ ಮೇಲೆ ಮಿತಿಯನ್ನು ಹಾಕಬೇಕು ಎಂದು ಇನ್ನೊಂದು ಮಸೂದೆಯನ್ನು ಈ ಸದನದಲ್ಲಿ ಮಂಡಿಸಬೇಕಾಗಿತ್ತು. ಏತಕ್ಕೆಂದರೆ ಈ ಬಗ್ಗೆ ಹೇಳುವುದಕ್ಕೆ ನಮಗೆ ಅವಕಾಶ ಬೇಕು. ಈಗ ನೀವೆಲ್ಲಾ ಸದಸ್ಯರಾಗಿದ್ದೀರಿ. ನಿಮ್ಮ ಅನುಭವವನ್ನೂ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಬೇಕಾದರೆ ನೀವೆಲ್ಲಾ ಪಾರ್ಲಿಮೆಂಟಿಗೆ ಹೋಗಿ ಹೇಳುತ್ತೀರಾ ? ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರ ಯೋಚನೆ ಮಾಡಿ ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಈ ಹೊತ್ತಿನ ದಿವಸ ಕೇಂದ್ರ ಸರ್ಕಾರ ಬಲಿಷ್ಠವಾಗಿದೆ. ಕಾರಣ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಆಡಳಿತ ಇರುವುದು. ಸರ್ವೇಸಾಧಾರಣವಾಗಿ ಬಹುಮಟ್ಟಿಗೆ ರಾಜ್ಯ ಸರ್ಕಾರಕ್ಕೆ ಇರತಕ್ಕಂಥಾ ಅಧಿಕಾರವನ್ನು ಕಸಿದು ಕೊಳ್ಳುತ್ತಿದ್ದಾರೆ. ಇದರಿಂದ ರಾಜ್ಯ ಸರ್ಕಾರಗಳು ಸಂದರ್ಭ ಬಂದಾಗ ಅವರೊಡನೆ ಧೈರ್ಯವಾಗಿ ನಿಂತು ಹೇಳತಕ್ಕಂಥ ಒಂದು ಶಕ್ತಿಯನ್ನೂ ಕೂಡ ಕ್ರಮ ಕ್ರಮವಾಗಿ ಕಳೆದುಕೊಳ್ಳುತ್ತಾ ಇವೆ. ಈ ಗಾಗಲೇ ರಾಜ್ಯ ಸರ್ಕಾರಗಳಿಗೆ ಇದ್ದ ಎಷ್ಟೋ ಅಧಿಕಾರವು ಕೈಬಿಟ್ಟಿದೆ. ಇದಕ್ಕೆ ಬೇರೆ ಬೇರೆ ಕಾರಣಗಳೂ ಸಹ ಇವೆ. ಈಗ ರಾಜ್ಯ ಸರ್ಕಾರಗಳಿಗೆ ಇದ್ದಂಥ ಹಕ್ಕು ಬಾಧ್ಯತೆಗಳನ್ನು ಹಂತಹಂತವಾಗಿ ಕಸಿದುಕೊಳ್ಳುತ್ತಿದ್ದಾರೆ. ಇದುವರೆಗೆ ರಾಜ್ಯ ಸರ್ಕಾರಗಳು ಸ್ವಯಂ ಪ್ರೇರಿತವಾಗಿ ಇರುವುದಕ್ಕೆ ಏನು ಅವಕಾಶ ಇತ್ತೋ ಇದ್ದ ಅವಕಾಶವನ್ನೂ ಕೂಡ ಕೇಂದ್ರ ಸರ್ಕಾರ ಈ ಹೊತ್ತು ಕಸಿದು ಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಅದರಲ್ಲಿ ಈ ಹೊತ್ತಿನ ದಿವಸ ತಂದಿರತಕ್ಕಂಥ ನಿರ್ಣಯ ಇದರಲ್ಲಿ ಒಂದಾಗಿದೆ. ಆದರಿಂದ ನಮ್ಮ ಹಕ್ಕುಬಾಧ್ಯತೆಗೆ ಉಂಟಾಗಿರತಕ್ಕ ಚ್ಯುತಿಯನ್ನು ನಾವು ವಿಶಾದದಿಂದ ಗಮನಿಸಬೇಕಾಗಿದೆ. ಅಷ್ಟೇ ಅಲ್ಲ ಇದನ್ನು ನಾವು ದೂರದೃಷ್ಟಿಯಿಂದ ಆಲೋಚನೆ ಮಾಡಬೇಕು. ಮಾಡದೇ ಇದ್ದರೆ ಅದು ಕೊನೆಗೆ ನಮ್ಮ ಅಸ್ತಿತ್ವಕ್ಕೆ ಭಂಗ ತರಬಹುದು. ಏತಕ್ಕೆಂದರೆ ಈ ಹೊತ್ತಿನ ದಿವಸ ಕೇಂದ್ರ ಸರ್ಕಾರದಲ್ಲೂ ಮತ್ತು ರಾಜ್ಯ ಸರ್ಕಾರಗಳಲ್ಲೂ ಒಂದೇ ಆಡಳಿತ ಪಕ್ಷದ ಸರ್ಕಾರ ಇರುವುದರಿಂದ ನಮ್ಮ ಮಾತನ್ನು ಮೀರಿ ಹೋಗುವುದಿಲ್ಲ ಎಂದು ಈ ರೀತಿಯಾಗಿ ರಾಜ್ಯ ಸರ್ಕಾರಗಳಿಗೆ ಇರತಕ್ಕಂಥ ಸಾರ್ವಭೌಮ ಹಕ್ಕನ್ನು ಕ್ರಮಕ್ರಮವಾಗಿ ಕಸಿದುಕೊಳ್ಳುತ್ತಿದ್ದಾರೆ. ಆದುದರಿಂದ ಇವೆಲ್ಲವನ್ನೂ ಗಮನಿಸಬೇಕು. ನಾಳೆ ಈ ಪಕ್ಷವೇ ಆಡಳಿತ ನಡೆಸುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಬೇರೆ ಪಕ್ಷ ಬರಬಹುದು. ಇದೇ ಪಕ್ಷವೇ ಇರುತ್ತದೆ ಎನ್ನುವುದ ಶಾಶ್ವತವಲ್ಲ. ಇದೇ ಪಕ್ಷವೇ ಇರುತ್ತದೆ ಎಂದು ಭಾವಿಸುವುದಾದರೆ ಅದು ತಪ್ಪು. ನಾಳೆ ರಾಜ್ಯದಲ್ಲಿ ಬೇರೆ ಪಕ್ಷದವರು ಬಂದು ಆಡಳಿತ ನಡೆಸುವುದಕ್ಕೆ ಸಾಧ್ಯ ಇದೆ. ಆದುದರಿಂದ ಈ ಒಂದು ನಿರ್ಣಯದಲ್ಲಿ ಏನು ಇದೆ ಆ ಬಗ್ಗೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಬೇಕಾಗಿತ್ತು. ಅದನ್ನು ಕೇಳಲಿಲ್ಲ. ಆದುದರಿಂದ ಈಗ ತಂದಿರತಕ್ಕಂಥ ನಿರ್ಣಯವನ್ನು ಈ ಸಭೆ ಒಪ್ಪುವುದಾದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಇನ್ನಾವ ಸಂದರ್ಭದಲ್ಲಿ ನಗರಾಸ್ತಿಯ ಮೇಲೆ ತನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಉಂಟು ಹೇಳಿ. ಈ ಬಗ್ಗೆ ಏನಾದರೂ ಹೇಳಬೇಕಾದರೆ ನಮ್ಮ ರಾಜ್ಯದ ಲೋಕಸಭಾ ಸದಸ್ಯರು ಹೇಳಬೇಕು. ಇನ್ನು ಯಾವ ಸಂದರ್ಭದಲ್ಲೂ ಹೇಳುವುದಕ್ಕೆ ನಮಗೆ ಅಧಿಕಾರ ಇಲ್ಲ. ಒಂದು ವೇಳೆ ಕೇಂದ್ರ ಸರ್ಕಾರದವರು

ಈ ಬಗ್ಗೆ ಕಾನೂನು ಮಾಡಿ ಕಳುಹಿಸಿದ ಮೇಲೆ ಅದರಲ್ಲಿ ಏನು ಇದ್ದರೂ ನಾವು ಅದಕ್ಕೆ ''ಅಸ್ತು'' ಎಂದು ಹೇಳುವುದು ಅಷ್ಟೆ ಉಳಿದಿರುವುದು. ಆದ್ದರಿಂದ ನಗರಾಸ್ತಿಯ ಮೇಲೆ ಮಿತಿ ಹಾಕತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ. ಏತಕ್ಕೆಂದರೆ ಈ ಹೊತ್ತಿನ ದಿವಸ ಗ್ರಾಮಾಂತರ ಪ್ರದೇಶದ ಆಸ್ತಿಮೇಲೆ ಆಯಾಯಾ ರಾಜ್ಯ ಸರ್ಕಾರಗಳು ಆಯಾಯಾ ರಾಜ್ಯದ ಪರಿಸ್ಥಿತಿಯನ್ನು ಗಮನ ದಲ್ಲಿಟ್ಟುಕೊಂಡು ಯಾವರೀತಿಯಾಗಿ ಒಂದು ಮಿತಿಯನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದಾರೋ ಅದೇ ರೀತಿಯಾಗಿ ಈ ಒಂದು ನಗರದ ಆಸ್ತಿಯ ಮೇಲೂ ಕೂಡ ರಾಜ್ಯ ಸರ್ಕಾರ ಅಧಿಕಾರಕ್ಕೆ ಒಳಪಟ್ಟಿದ್ದರೆ ನಮ್ಮ ರಾಜ್ಯದ ಪರಿಸ್ಥಿತಿಯನ್ನೂ ಕೂಡ ಗಮನದಲ್ಲಿಟ್ಟುಕೊಂಡು ನೀವು ಒಂದು ಕಾನೂನನ್ನು ತರುವುದಕ್ಕೆ ಅನುಕೂಲವಾಗುತ್ತಿತ್ತು. ಅದು ಸಾಧುವಾದುದು. ಕೇಂದ್ರ ಸರ್ಕಾರದವರು ಇಂತಹ ಒಂದು ಅವಕಾಶವನ್ನು ರಾಜ್ಯ ಸರ್ಕಾರಗಳಿಗೆ ಮಾಡಿಕೊಡದೆ ರಾಜ್ಯ ಸರ್ಕಾರಕ್ಕೆ ಇದ್ದಂಥ ಅಧಿಕಾರವನ್ನು ಕಸಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಹೊತ್ತು ಇನ್ನೊಂದು ಮಾತು ಹೇಳುತ್ತೇನೆ. ರಾಜ್ಯ ಸರ್ಕಾರ ತನ್ನ ಅಭಿಪ್ರಾಯವನ್ನು ಈ ಬಗ್ಗೆ ಹೇಳದೇ ಹಾಗೆ ಉಳಿಯುವುದಕ್ಕೂ ಸಾಧ್ಯ ಇದೆ. ಇದನ್ನು ಇನ್ನು ಯಾವಸಂದರ್ಭದಲ್ಲಿ ಹೇಳಬಹುದು ಎಂದರೆ ಮುಖ್ಯ ಮಂತ್ರಿಗಳ ಒಂದು ಸಭೆ ಸೇರಿದಾಗ ಆ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಬಹುದು. ಶಾಸನ ಸಭೆಯಲ್ಲಿ ಈ ಅಭಿಪ್ರಾಯವನ್ನು ಕೊಟ್ಟರು ಎಂದು ಹೇಳಬಹುದು. ಇದನ್ನು ಕೇಂದ್ರ ಸರ್ಕಾರ ಮಾನ್ಯ ಮಾಡದೇ ಇರಬಹುದು. ಹಾಗಾದರೆ ನಮ್ಮ ಅಸ್ತಿತ್ವ ಏನಾಗ ಬೇಕು ? ಅದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ಆದುದರಿಂದ ನಾನು ರಾಜ್ಯ ಸರ್ಕಾರಕ್ಕೆ ಕೇಳಿಕೊಳ್ಳುವುದು ಇಷ್ಟೆ. ತಾವು ಕೇಂದ್ರ ಸರ್ಕಾರಕ್ಕೆ ಹೆದರಬೇಕಾದ ಅಗತ್ಯವಿಲ್ಲ. ನೀವು ಧೈರ್ಯವಾಗಿ ನಿಂತು ಹೇಳಬೇಕು ನಾವೇ ಈ ಕೆಲಸವನ್ನು ಮಾಡುತ್ತೇವೆ ನೀವು ಭೂಸುಧಾರಣೆಗೆ ಹೇಗೆ ಒಂದು ಗೈಡ್ ಲೈನ್ ಕೊಟ್ಟಿರೋ ಅದೇ ರೀತಿಯಾಗಿ ಕೇಂದ್ರ ಸರ್ಕಾರದ ಆರ್ಥಿಕ ತಜ್ಞರುಗಳು ಏನು ಇದ್ದಾರೋ ಅವರನ್ನೂ ಸೇರಿಸಿಕೊಂಡು ಈ ಬಗ್ಗೆ ಒಂದು ಗೈಡ್ ಲೈನ್ ಕೊಡಿ ಎಂದು. ಗೈಡ್‌ಲೈನ್ಸ್ ಆಧಾರದ ಮೇಲೆ ನಗರ ಪ್ರದೇಶದ ಆಸ್ತಿ ಮೇಲೆ ಮಿತಿಯನ್ನು ಹಾಕತಕ್ಕ ಕೆಲಸ ನಮಗೆ ಬಿಟ್ಟರೆ ಆ ಗೈಡ್‌ಲೈನ್ಸ್ ಆಧಾರದ ಮೇಲೆ ನಮ್ಮ ದೃಷ್ಟಿಯಿಂದ ನಮ್ಮ ರಾಜ್ಯದ ಪರಿಸ್ಥಿತಿ ದೃಷ್ಟಿಯನ್ನು ಇಟ್ಟುಕೊಂಡು ಯಾವ ರೀತಿ ಮಿತಿಯನ್ನು ಹಾಕಬೇಕು ಎಂಬುದನ್ನು ನೋಡಿಕೊಂಡು ಅದನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಂತಹ ಕೆಲಸ ಈಗಾಗಲೇ ರಾಜ್ಯಸರ್ಕಾರ ಮಾಡಲೇ ಬೇಕಾಗಿತ್ತು. ಗ್ರಾಮಾಂತರ ಪ್ರದೇಶದ ಮಿತಿಯನ್ನು ಹಾಕುವುದಕ್ಕೆ ಯಾವರೀತಿ ಗೈಡ್‌ಲೈನ್ ಸೂಚಿಸಿದ್ದಾರೆ ಅದೇ ರೀತಿ ನಗರಪ್ರದೇಶದ ಆಸ್ತಿಮೇಲೆ ಗೈಡ್‌ಲೈನ್ಸ್ ಕೊಟ್ಟರೆ ಉಳಿದ ಎಲ್ಲಾ ಕೆಲಸ ಮಾಡಿ ಕೊಳ್ಳುತ್ತೇವೆಂದು ಕೇಂದ್ರಸರ್ಕಾರಕ್ಕೆ ರಾಜ್ಯ ಸರ್ಕಾರ ತಿಳಿಸಬೇಕಾಗಿತ್ತು ಯಾತಕ್ಕೆ ತಿಳಿಸಲಿಲ್ಲವೋ ಗೊತ್ತಿಲ್ಲ. ಏಕ್‌ದಮ್ ಸೂಚನೆ ಬಂದಕೂಡಲೆ ಈ ಸದನದ ಒಪ್ಪಿಗೆ ಪಡೆದು ನಮಗೆ ಇರತಕ್ಕ ಹಕ್ಕನ್ನು ಕಸಿದುಕೊಂಡು ಕೇಂದ್ರಕ್ಕೆ ಈ ಜವಾಬ್ದಾರಿಯನ್ನು ವಹಿಸಿಕೊಡುವುದಕ್ಕೆ ಮುಂದಾದರೆ ಅದರಿಂದ ನಮಗೆ ಬಹಳ ತಾರತಮ್ಯ ಮಾಡಿದಂತಾಗುತ್ತದೆ. ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಹಚ್ಚಿದಂತಾಗುತ್ತದೆ. ನಗರ ಪ್ರದೇಶದಲ್ಲಿರುವ ಸ್ಥಿತಿಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಾಗಿದೆ. ಗ್ರಾಮಾಂತರ ಪ್ರದೇಶದ ಬೆಳವಣಿಗೆಯಲ್ಲಿ ನಗರಪ್ರದೇಶದ ಬೆಳವಣಿಗೆಯಲ್ಲಿ ವಿಶೇಷವಾದ ವ್ಯತ್ಯಾಸವಿದೆ. ಮನುಷ್ಯ ಮನುಷ್ಯನಲ್ಲಿ ವರ್ಗವರ್ಗದಲ್ಲಿ ಎಷ್ಟೋ ಅಸಮಾನತೆ ಕಾಣುತ್ತದೆ. ಇಷ್ಟು ಅಸಮಾನತೆ ಇರಬೇಕಾದರೆ ಕನಿಷ್ಟ ಸ್ಥಿತಿಯಲ್ಲಿರತಕ್ಕ ಗ್ರಾಮಪ್ರದೇಶದವರ ವ್ಯಾಪ್ತಿಯಲ್ಲಿ ಬಂದಾಗ ಆ ಕೆಲಸಗಳನ್ನು ರಾಜ್ಯ ಸರ್ಕಾರ ಮಾಡಿದಾಗ ನಗರ ಪ್ರದೇಶಕ್ಕೆ ಮಿತಿಯನ್ನು ಹಾಕುವುದಕ್ಕೆ ನಮಗೆ ಅಧಿಕಾರವಿಲ್ಲ ಎಂದು ಹೇಳಿದರೆ ಜನ ಮೆಚ್ಚತಕ್ಕದ್ದಲ್ಲ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ನಾವು ಬಹಳ ವಿಚಕ್ಷಣೆಯಿಂದ ಕೆಲಸ ಮಾಡಬೇಕು. ನಾವು ಈ ಜವಾಬ್ದಾರಿಯನ್ನು ಕಳೆದುಕೊಂಡರೆ ಗ್ರಾಮಾಂತರ ಪ್ರದೇಶದ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಭೂಸುಧಾರಣೆ ಚರ್ಚೆ ಕಾಲದಲ್ಲಿ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದಂತಹ ಸಂದರ್ಭದಲ್ಲಿ ನಾನು ಈ ಮಾತನ್ನು ಹೇಳಿದ್ದರೆ ನಾನು ಕೂಡ ಭೂಸುಧಾರಣೆಯನ್ನು ವಿರೋಧ ಮಾಡಿದರು ಎನ್ನುವ ಅಭಿಪ್ರಾಯಕ್ಕೆ ಬರುತ್ತಿತ್ತು. ಅದಕ್ಕೆ ಅವಕಾಶ ಆಗಬಾರದು ಎಂದು ಆಯಾಯಾ ವಿಷಯವನ್ನು ಆಯಾಯಾ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಹೇಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವೊತ್ತು ನಾವು ಗ್ರಾಮಾಂತರ ಪ್ರದೇಶದ ಮಿತಿಯನ್ನು ಹಾಕುವುದರ ಜೊತೆಗೆ ನಗರ ಆಸ್ತಿಯ ಮೇಲೂ ಮಿತಿಯನ್ನು ಹಾಕಲೇಬೇಕು. ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹಿಂದಿನ ಸರ್ಕಾರ ಮಾಡಬಹುದಿತ್ತು, ಅದು ಮಾಡಲಿಲ್ಲ. ಈಗಿನ ಸರ್ಕಾರ ಮಾಡಬೇಕು. ಯಾವ ಅಸಮಾನತೆಯನ್ನು ಕಾಣಬಾರದು. ನಗರದಲ್ಲಿ ಇರಲಿ, ಗ್ರಾಮಾಂತರ ಪ್ರದೇಶದಲ್ಲಿ ಇರಲಿ ಆಸ್ತಿಯನ್ನು ಹೊಂದಬೇಕಾದರೆ ಸಮಾನತೆ ಇರಬೇಕು ಅವರಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು. ಆದರೆ ವೈಚಾರಿಕವಾಗಿ ಅದರಲ್ಲಿ ವ್ಯತ್ಯಾಸದ ಸಮಾನತೆಯನ್ನು ಉಂಟುಮಾಡುವುದೇ ನಮ್ಮ ಮುಂದೆ ಇರುವ ಪ್ರಶ್ನೆ ಈ ಪ್ರಶ್ನೆಯಲ್ಲಿ ಲಗುವಾಗಿ ಹಗುರವಾಗಿ ವಿಚಾರ ಮಾಡುವುದನ್ನು ಕೈಬಿಡಬೇಕು. ಯಥಾಪ್ರಕಾರ ಹಿಂದಿನ 25 ವರ್ಷಗಳಲ್ಲಿ ಪ್ರಜಾಪ್ರಭುತ್ವದ ಆಡಳಿತ ನಡೆದುಕೊಂಡು ಬಂದಿದೆ. ಅದೇ ರೀತಿ ಮುಂದೆಯೂ

(ಶ್ರೀ ಕಾಗೋಡು ತಿಮ್ಮಪ್ಪ)

ಹೋಗುತ್ತದೆ. ಅಷ್ಟು ಅಸಮಾನತೆಗೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಕ್ತಿ ವ್ಯಕ್ತಿಗೆ ಅಸಮಾನತೆ ಇದ್ದರೆ ಮುಂದೆ ಕೂಡ ಮುಂದುವರಿಯುತ್ತದೆಂದು ಹೇಳುವುದು ಸರಿಯಲ್ಲ ಇದನ್ನು ಕೊನೆಗಾಣಿಸಬೇಕು ಇಲ್ಲದೆಹೋದರೆ ಈ ಅಸಮಾನತೆಯು ಫಲವಾಗಿ ರಕ್ತಕ್ರಾಂತಿ ಆದೀತು, ಅದನ್ನು ತಪ್ಪಿಸಬೇಕು. ದೇಶದಲ್ಲಿ ಸಮಾನತೆಯನ್ನು ತರಬೇಕು. ಅದು ಸಮಾಜವಾದದ ಮಾರ್ಗ ಅದು ಸಾಧ್ಯ ಎಂದು ಹೆಚ್ಚು ಕಡಿಮೆ ಎಲ್ಲಾ ಭಾಗದ ಜನರು ಒಪ್ಪಿಕೊಂಡಿದ್ದಾರೆ. ಒಂದು ಕಲಸದಲ್ಲಿ ನಾವು ಸಕ್ರಿಯವಾಗಿ ಭಾಗವಹಿಸಬೇಕು. ಜವಾಬ್ದಾರಿ ಪ್ರತಿಯೊಂದು ರಾಜ್ಯಸರ್ಕಾರಕ್ಕೂ ಇರಬೇಕು. ನಮಗೂ ಇರಬೇಕು ಅದು ಇಲ್ಲದೆ ಇರುವುದು ವಿಷಾದಕರ. ಇನ್ನು ನಗರ ಆಸ್ತಿಮೇಲೆ ಮಿತಿ ಹಾಕುವುದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಆದರೆ ಈ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧಮಾಡುತ್ತೇನೆ. ಈ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ಗ್ರಾಮಾಂತರ ಪ್ರದೇಶದ ಜನರಿಗೆ ತೀರಾ ಅನ್ಯಾಯ ಮಾಡಿದಂತಾಗುತ್ತದೆ. ಯಾತಕ್ಕೆ ಹೀಗೆ ಮಾಡಿದಿರಿ ಎಂದು ನಾಳೆ ಪ್ರಶ್ನೆ ಕೇಳಿದರೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ನನ್ನ ಅಭಿಪ್ರಾಯವನ್ನು ನಗರ ಆಸ್ತಿ ಮಿತಿ ಮೇಲೆ ಹೇರುವುದರಲ್ಲಿ ಹೇಳಬೇಕು. ಅದು ಸಭೆಯಲ್ಲಿ ಚರ್ಚೆಯಾಗಬೇಕು ಮತ್ತು ತೀರ್ಮಾನವಾಗಬೇಕು. ಅದರ ಪ್ರಕಾರ ಕೇಂದ್ರಸರ್ಕಾರ ಒಪ್ಪಿಕೊಳ್ಳಬೇಕು. ನಂತರ ಸರ್ಕಾರ ಮಿತಿಯನ್ನು ಹಾಕಬೇಕು ಈ ಕೆಲಸ ಸರ್ಕಾರ ಮಾಡಬೇಕು ಎಂದು ಶೀಘ್ರವಾಗಿ ಒತ್ತಾಯ ಮಾಡಬೇಕಾಗುತ್ತದೆ ಅದರಿಂದ ಹಿಂದೆ ಹೋದರೆ ಕಷ್ಟವಾಗುತ್ತದೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI K. PUTTASWAMY (Chamundeshwari)-Madam Speaker, I would like to bring to the notice of the Hon. Minister for Revenue that instances have come to the notice of most of the Members that very valuable properties are being transfered to other persons, with a view to avoid the impending legislation for imposing ceiling on urban immovable property. I would like to ask the Government whether, just as certain other States have already promulgated, they also have in their minds to promulgated a legislation or an Ordinance to prevent tranfer of valuable pr perts pending passing this legislation finally. That is one thing.

I would further like to ask the Hon. Minister to kindly clarify what exactly is the urban immovable property that they are having in their mind. I have absolutely no objection for/enteresting this power of legislation to parliament. Parliament is a bigger body and its laws are applicable throughout the country and for the sake of unifomity I would certainly welcome it but before entrusting this legislative power to Parliament, I would like to ask: 'What is the power that you are going to entrust to the Parliament? I do not expect that all this would be included in the Resolution. At least while moving the Resolution, I expected that the Hon. Minister would tell us what he has in his mind. Is just a resolution, or I would like to know whether the Government have receivad any communication from the Centre — whether there is any explanatory note attached to the resolution. I would like the Hon. Minister to tell us clearly what it is that they are having in their minds by the term 'urban immovable property', There may be so many exceptions. I would like to know whether they have any exceptions in their mind or not: Likewise, the first part of the Resolution says that imposition of ceiling on such

property in excess of the ceiling limit with a view to utilising such excess for public purposes is a matter of general importance, I do concede that it is a matter of utmost general importance, but while acquiring this property which would be in excess of the ceiling limit, I would like to know what the compensation is; whether Government have got in their mind any amount to be paid for the property, when they are going to acquire and if so, what is the basis on which the amount is fixed; because, they are now very touchy about using the word 'compensation'. I would not like to use that word. Also, I would like to know as to what is the amount that the Government would have is their mind to pay, for the property that they are going to acquire and how they are going to calculate that amount. Because this is a legislative right that this House has, while entrusting this legislative right to the parliament, we must also know what is the right that we are going to entrust to the parliament I would like the Hon. Minister to kindly clarify these points, so that the remarks that we offer on this Resolution may be useful.

5-00 p.m.

ಶ್ರೀ ಎನ್ ಹುಚ್ಚಮಾಸ್ತಿಗೌಡ- ಮಾನ್ಯ ಅಧ್ಯಕ್ಷರೆ, ಒಂದನೆಯದು ಆಸ್ತಿಗಳನ್ನು ಪರಭಾರೆ ಮಾಡುತ್ತಾ ಇದ್ದಾರೆ ಅದನ್ನು ತಪ್ಪಿಸುವುದಕ್ಕೆ ಸರ್ಕಾರ ಏನಾದರೂ ಆಲೋಚನೆ ಮಾಡಿದೆಯೇ ಎಂದು ಮಾನ್ಯ ಸದಸ್ಯರು ಕೇಳಿದರು. ಕೆಲವು ರಾಜ್ಯಗಳಲ್ಲಿ ಪರಭಾರೆ ಮಾಡುವ ಬಗ್ಗೆ ಕ್ರಮ ತೆಗೆದು ಕೊಂಡಿದ್ದಾರೆ ಎನ್ನುವುದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಇಲ್ಲಿ ಪರಭಾರೆ ಮಾಡುವುದನ್ನು ತಪ್ಪಿಸುವುದಕ್ಕೆ ನಾವು ಏನೂ ಆಲೋಚನೆ ಮಾಡಿಲ್ಲ. ಎರಡನೆಯದಾಗಿ, ಕಲವು ವಿವರಗಳನ್ನು ಮಾನ್ಯ ಸದಸ್ಯರು ಕೇಳಿದರು, ಭೂ ಮಾಲೀಕರಿಗೆ ಕಾಂಪನ್ಸೇಷನ್ ಕೊಡುವುದಾಗಲಿ, ಯಾವ ಯಾವ ಆಸ್ತಿಗೆ ವಿನಾಯಿತಿ ಕೊಡುವುದಾಗಲಿ ಇತ್ಯಾದಿ ವಿಷಯಗಳು ಏನಿವೆ ಇವೆಲ್ಲವೂ ಬರುವ ಬಿಲ್ಲಿನಲ್ಲಿ ಅಡಕ ಮಾಡುವ ವಿಷಯಗಳು. ನಮಗೆ ಇರತಕ್ಕ ಪೂರಾ ಹಕ್ಕನ್ನು ಸಸಂತ್ತಿಗೆ ವಹಿಸತಕ್ಕ ಬಗ್ಗೆ ಮಾನ್ಯ ಸದಸ್ಯರು ಕೇಳಿರ ತಕ್ಕ ವಿವರಗಳು ಬಿಲ್ಲಿನಲ್ಲಿ ಬರತಕ್ಕ ವಿಷಯಗಳಾಗಿವೆ. (Sri T. R. Shamanna stood up to Speak)

Sri S. Bangarappa.—My request for perimtting me to speak has already been sent to the Hon. Deputy Speaker and he had agreed to give me a chance to speak.

Medam Speaker — I have called Sri Shamanna to speak. Sri Bangarappa has got to wait for his chance.

Sri S. Bangarppa — I request the Hon. Chair to carry out the assurance of the Deputy Speaker.

Madam Speaker— Why is the member arguing? He may please sit down

ಶ್ರೀ ಎಸ್. ಬಂಗಾರಪ್ಪ- ನಾನು ಆರ್ಗುಮೆಂಟ್ ಮಾಡುತ್ತಾ ಇಲ್ಲ. ಕೇಳಿದ ಅಷ್ಟೆ. ಡೆಪ್ಯೂಟಿ ಸ್ಪೀಕರ್ ಅವರು ಒಪ್ಪಿದ್ದರು.

ಅಧ್ಯಕ್ಷರು- ನೋಡೋಣ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ- ಮಾನ್ಯ ಡೆಪ್ಯೂಟಿಸ್ಪೀಕರ್ ಅವರು ಒಪ್ಪಿದ್ದರು ಎಂದು ನೆನಪು ಮಾಡಿ ಕೊಟ್ಟೆ.

ಅಧ್ಯಕ್ಷರು- ಮಾನ್ಯ ಸದಸ್ಯರು ಈ ರೀತಿ ಮಾತನಾಡಿದರೆ, ಪ್ರೊಸೀಡಿಂಗ್ಸ್ ಅನ್ನು ಕಂಡಕ್ಟ್ ಮಾಡುವುದು ಕಷ್ಟವಾಗುತ್ತದೆ. ಅದನ್ನು ಬದಲಾವಣೆ ಮಾಡುವ ಅಧಿಕಾರ ನನಗಿಲ್ಲವೆ ?

~~Sri S.~~ Bangarappa-Then, it is very difficult for us to participate n the proceedings.

ತಾವು ಯಾರನ್ನಾದರೂ ಕರೆಯಬಹುದು. ನಮಗೂ ಪ್ರೊಸೀಡಿಂಗ್ಸ್‌ನಲ್ಲಿ ಹೇಗೆ ಭಾಗವಹಿಸ ಬೇಕೆಂದು ಅರ್ಥವಾಗುತ್ತಿಲ್ಲ.

† ಶ್ರೀ ಟಿ, ಆರ್. ಶಾಮಣ್ಣ-- (ಕೋಟೆ)

ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕ ನಿರ್ಣಯ, ಪಟ್ಟಣಗಳ ಆಸ್ತಿಯ ಬಗೆ ಮಿತಿಯನು ತರಬೇಕು ಎಂದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಬಿಟು ಕೊಡತಕ್ಕಂಥ ಒಂದು ನಿರ್ಣಯ ನಮ್ಮ ಮುಂದಿದೆ. ನನಗಾದರೊ ಆಗತಕ್ಕ ಸೋಜಿಗ ಏನೆಂದರೆ ಕೇಂದ್ರದಲ್ಲಿ ಕೊಟ್ಟಿರತಕ್ಕ ಕೆಲವು ಆದೇಶಗಳನ್ನು, ಪ್ರಗತಿ ತೋರಿಸುತ್ತವೆ. ಎಂದು ಹೇಳಿ ಭೂಸುಧಾರಣೆಯನ್ನು ನಮ್ಮ ಮುಂದೆ ಇಟ್ಟು ಅದರಲ್ಲಿ ಕೇಂದ್ರದವರು ಹತ್ತು ಎಕರೆಯಿಂದ ೧೮ ಎಕರೆವರೆಗೆ ಮಿತಿ ಇರಬೇಕು ಎಂದು ಇದ್ದುದನ್ನು ಪ್ರಗತಿ ಪರವಾಗಿ ಕಲಸ ಮಾಡತಕ್ಕವರು ಸೋಷಿಯಲಿಸಂ ಅನ್ನು ಹೆಚ್ಚಾಗಿ ಅಭ್ಯಾಸ ಮಾಡಿರತಕ್ಕವರು ನಾವು ಎಂದು ಹತ್ತು ಎಕರೆಗೆ ಇಳಿಸಿದರು. ಭೂಮಿ ಅಲ್ಲದೆ ಬೇರೆ ವರಮಾನದಿಂದ ೧೨ ಸಾವಿರ ರೂಪಾಯಿ ವರಮಾನ ಬಂದರೆ, ಅಂಥವರು ಭೂಮಿಯನ್ನು ಇಟ್ಟುಕೊಳ್ಳಬಾರದು ಎಂದು ನಿರ್ಣಯ ತೆಗೆದುಕೊಂಡು ಬಂದಿದ್ದಾರೆ. ಕೊನೆಗೆ ೧೬ ಕಿಲೋಮೀಟರ್ ದೂರದಲ್ಲಿ ವಾಸಮಾಡತಕ್ಕವರು ಭೂಮಿಯನ್ನು ಇಟ್ಟು ಕೊಳ್ಳಬಾರದು ಎಂದು ಮಸೂದೆಯಲ್ಲಿ ಹೇಳಿದ್ದಾರೆ. ಧಾರ್ಮಿಕ ಸಂಸ್ಥೆಗಳು ವಿದ್ಯಾ ಸಂಸ್ಥೆಗಳು ಇತ್ಯಾದಿ ಸಂಸ್ಥೆಗಳಿಗೆ ವಿನಾಯಿತಿ ಇಲ್ಲ ಎನ್ನುವುದನ್ನು ಮಸೂದೆಯಲ್ಲಿ ತೆಗೆದುಕೊಂಡು ಬಂದಿದ್ದಾರೆ. ಇದೆಲ್ಲ ಕೇಂದ್ರದಲ್ಲಿ ಆದ ಶಿಫಾರಸ್‌ನ ಮೇಲೆ ಪ್ರಗತಿಪರ ಭೂ ಸುಧಾರಣೆ ಮಸೂಧೆಯನ್ನು ಇಲ್ಲಿ ಇಟ್ಟಿದ್ದಾರೆ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮೊದಲು ನಗರವಾಸಿಗಳಿಗೂ ಕೂಡ, ಇವರ ಹೇಳಿಕೆಯ ಪ್ರಕಾರ ಎರಡು ಲಕ್ಷಕ್ಕಿಂತ ಹೆಚ್ಚಾಗಿ ಮಿತಿ ಇರಕೂಡದು ಎಂದು ಇತ್ತು ಕಡೆಗೆ ಮೂರು ಲಕ್ಷ ಎಂದು ಹೇಳಿದರು. ಹೀಗೆ ಕೇಂದ್ರ ಸರ್ಕಾರದವರು ಯೋಚಿಸುತ್ತಾ ಇರುವಾಗ, ಐದು ಲಕ್ಷ ರೂಪಾಯಿ ತನಕ ಮಿತಿ ಇರಬೇಕು. ಸಿನಿಮಾ ಮಂದಿರಗಳಿಗೆ, ಹೋಟೆಲ್ಲುಗಳಿಗೆ ಕಮರ್ಷಿಯಲ್ ಕನ್ಸರ್ನ್‌ಗಳಿಗೆ, ಫ್ಯಾಕ್ಟರಿಗಳಿಗೆ, ಹೆಚ್ಚು ಬೆಲೆ ಬಾಳತಕ್ಕ ಆಸ್ತಿ ಪಾಸ್ತಿಗಳನ್ನು ಇಟ್ಟು ಕೊಂಡಿರುವವರಿಗೆ ವಿನಾಯಿತಿ ಇದೆಯೆಂದು ಹೇಳಿದರು. ಒಂದು ಕಡೆ ಹೆಚ್ಚು ಹೆಚ್ಚು ಲಾಭದಾಯಕ ಆಸ್ತಿ ಇರುವವರಿಗೆ ವಿನಾಯಿತಿ- ಇನ್ನೊಂದು ಕಡೆ ಗ್ರಾಮಾಂತರದಲ್ಲಿ ಜೀವನ ಮಾಡುವವರಿಗೆ ಮಿತಿ, ಅವರ ಸಂಖ ಜೀವನಕ್ಕೆ ಪೆಟ್ಟು. ನನಗೆ ಸೋಜಿಗ ಏನೆಂದರೆ, ಪ್ರಗತಿದಾಯಕವಾದ ಕಾಯಿದೆ ಮಾಡುತ್ತೇವೆಂದು ಹೋಗುವಾಗ, ಮಾಡಿದಂಥ ಕಾಯಿದೆ ಪ್ರಗತಿಪರದ ವಿರುದ್ಧವಾಗಿ ಬಿಟ್ಟು ಸೋಜಿಗವಾಗಿ ಕಾಣುತ್ತದೆ. ಈಗ ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ನಾನು ಹೆಚ್ಚು ಸಂಪರ್ಕ ಇಟ್ಟುಕೊಂಡಿರುವುದರಿಂದ, ಕಲವು ದಿವಸಗಳ ಹಿಂದೆ ಅಸೆಸ್‌ಮೆಂಟ್ ರಿಜಿಸ್ಟರನ್ನು ತಿರುವಿ ಹಾಕುತ್ತಾ ಬಂದೆ. ಬೆಂಗಳೂರು ನಗರದಲ್ಲಿ ಎಲ್ಲಾ ತೆಗೆದುಕೊಂಡು ಲೆಕ್ಕ ಹಾಕಿದರೂ ಈಗ ಇರತಕ್ಕ ಅಂದಾಜು ಪ್ರಕಾರ ೨೦ ಜನಗಳಿಗೆ ಮಾತ್ರ ಈ ಕಾಯಿದೆ ಅನ್ವಯಿಸುತ್ತದೆ, ವಿನಹ ಬೇರೆ ಯಾರಿಗೂ ಅನ್ವಯಿಸುವುದಿಲ್ಲ ಹೋಟೆಲುಗಳು ಸಿನಿಮಾ ಮಂದಿರಗಳು, ಕಮರ್ಷಿಯಲ್ ಕನ್‌ಸರ್ನ್ಸ್ ಬಿಟ್ಟರೆ, ವಾಸ ಮಾಡತಕ್ಕ ೫ ಲಕ್ಷಕ್ಕಿಂತ ಹೆಚ್ಚು ಇರುವ ಸಂಖ್ಯೆ ಸುಮಾರು ೨೦ ಅಥವಾ ಇನ್ನು ಒಂದು ಐದು ಹೆಚ್ಚಾಗಿ ಇರಬಹುದು ಬೆಂಗಳೂರು ನಗರದಲ್ಲಿ ಬಿಟ್ಟರೆ ಮೈಸೂರಿನಲ್ಲಿ ಇದ್ದಾರೆಯೇ ಮಂಡ್ಯದಲ್ಲಿ ಇದ್ದಾರೆಯೇ ಅಥವಾ ಮಂಗಳೂರಿನಲ್ಲಿ ಇದ್ದಾರೆಯೇ, ಹುಬ್ಬಳ್ಳಿ ಧಾರವಾಡದಲ್ಲಿ ಇದ್ದಾರೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ. ಮೈಸೂರು ರಾಜ್ಯದಲ್ಲಿ ಇನ್ನು ಯಾವ ಭಾಗದಲ್ಲಿಯೂ ಐದು ಲಕ್ಷಕ್ಕಿಂತ ಹೆಚ್ಚಾಗಿ ಬೆಲೆ ಬಾಳತಕ್ಕಂಥ ವಾಸ ಮಾಡುವ ಮನೆ ಸಿಕ್ಕುವುದಿಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಈಗಿನ ಕಾಯಿದೆ ಪ್ರಕಾರ ಒಬ್ಬನು ವಾಸಕ್ಕೆ ಇಟ್ಟುಕೊಂಡ ಮನೆ ಐದು ಲಕ್ಷ ಬೆಲೆ ಬಾಳುತ್ತಿದ್ದರೆ ಅವನಿಗೆ ಟ್ಯಾಕ್ಸ್ ತೆಗೆದುಕೊಂಡು ವಿನಾಯಿತಿ ಕೊಡಬಹುದು. ಹಾಗೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಈ ಬಿಲ್ಲಿನಿಂದ ಯಾವ ಪ್ರಗತಿಯನ್ನಾಗಲಿ ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆಂದಾಗಲೀ ಹೇಳುವುದರಲ್ಲಿ ನನಗೆ ಪೂರ್ಣ ನಂಬಿಕೆಇಲ್ಲ. ಆಸ್ತಿಯನ್ನು ಹೆಚ್ಚಾಗಿ ಇಟ್ಟುಕೊಂಡಿರುವವರು ಬೆಂಗಳೂರಿನಲ್ಲಿ ವಿನಹ ಬೇರೆ ಯಾವ ಕಡೆಯೂ ಇಲ್ಲವೆಂದು ನಾನು ಖಡಾಖಂಡಿತವಾಗಿ ಹೇಳಬಲ್ಲೆ. ಇದರ

ಬಗ್ಗೆ ನಮಗೆ ಇರತಕ್ಕ ಅಧಿಕಾರವನ್ನು ಕೇಂದ್ರಕ್ಕೆ ಏತಕ್ಕೆ ಬಿಟ್ಟುಕೊಡಬೇಕು ? ನೆರೆ ರಾಜ್ಯ ತಮಿಳ್ನಾಡಿನಲ್ಲಿ ತಮ್ಮದೇ ಆದ ಒಂದು ಕಾಯಿದೆಯನ್ನು ಮಾಡಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ. ನಮ್ಮವರ ಈ ಅಧಿಕಾರವನ್ನು ಕೇಂದ್ರಕ್ಕೆ ಬಿಡುವುದಿಲ್ಲ, ನಾವೇ ಮಾಡಿಕೊಳ್ಳುತ್ತೇವೆ., ಪ್ರಗತಿಪರ ಎಂದು ಹೇಳುತ್ತಾರೆ. ಆದರೆ ಕೇಂದ್ರದವರು ಹೇಳುವುದಕ್ಕಿಂತ ಮುಂಚೆ ಅವರ ಬಿಲ್ಲನ್ನು ಹಿಡಿದುಕೊಂಡು ಹೋಗುತ್ತಾರೆ ಈ ವಾದ ನಮಗೆ ಅರ್ಥವಾಗದೆ ಇರುವ ವಾದವಾಗಿದೆ. ಕೇಂದ್ರದಲ್ಲಿ ತಯಾರುಮಾಡತಕ್ಕ ಬಿಲ್ಲು, ನಮ್ಮ ರಾಜ್ಯದಲ್ಲಿ ನಮ್ಮದಾಗಿ ಅನುಕರಣೆಗೆ ಬಂದ ಪಕ್ಷದಲ್ಲಿ ಮೈಸೂರಿನಲ್ಲಿ ಯಾವ ಪ್ರಗತಿಯೂ ಆಗುವುದಿಲ್ಲ ಎಂದು ನಾನು ಹೇಳಬಲ್ಲೆ.ಐದು ಜನ ಐಶ್ವರ್ಯವಂತರು ಇಟ್ಟುಕೊಂಡಿರತಕ್ಕದ್ದಕ್ಕೆ ಕಾಯಿದೆ ಮಾಡಬೇಕು ಎನ್ನುವ ತತ್ವ ಯಾವ ರೀತಿಯಲ್ಲೂ ಒಳ್ಳೆಯದಲ್ಲ. ಅನೇಕರು ತಮಗೆ ಇರತಕ್ಕ ಆಸ್ತಿಪಾಸ್ತಿಗಳನ್ನು ತಮ್ಮ ಮಕ್ಕಳ ಹೆಸರಿಗೆ, ಬೇರೆಯವರ ಹೆಸರಿಗೆ ಮಾಡಿ ಈ ಮಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಬೇಕಾದಷ್ಟು ಪ್ರಯತ್ನನಡೆದಿದೆ ಈಬಿಲ್ ಪಾಸಾಗಿ ಕಾರ್ಯಗತವಾಗುವ ಹೊತ್ತಿಗೆ ಯಾವ ಆಸ್ತಿಯೂ ಸಿಕ್ಕುವುದಿಲ್ಲ ಎನ್ನುವ ನಂಬಿಕೆ ನನಗಿದೆ. ಆದ್ದರಿಂದ ಕೊನೆ ಯದಾಗಿ ಹೇಳಬೇಕಾದರೆ ಈ ಬಿಲ್ ಚರ್ಚೆಗೆ ಬಂದಾಗ/ ಚರ್ಚೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ವಿಚಾರಗಳನ್ನು ನಾನು ಹೇಳುತ್ತೇನೆ. ನನಗೆ ಅರ್ಥವಾಗದ ಇನ್ನೊಂದು ವಿಚಾರ ಏನೆಂದರೆ, ಒಂದು ಕಡೆ ಸಮಾಜವಾದವನ್ನು ಹೇಳುತ್ತೀರಿ, ಬೆಂಗಳೂರಿನಲ್ಲಿರುವಷ್ಟು ಸಿನಿಮಾ ಮಂದಿರಗಳು ಯಾವ ಕಡೆಯಲ್ಲಿಯೂ ಇಲ್ಲ. ಖಾಲಿ ಇದ್ದ ಜಾಗಗಳಲ್ಲಿ ಸಿನಿಮಾ ಮಂದಿರಗಳನ್ನು ಕಟ್ಟುತ್ತಲೇ ಇದ್ದಾರೆ, ಆದ್ದರಿಂದ ಅವುಗಳ ಮೇಲೆಯೂ ಮಿತಿ ಹಾಕಿದರೆ ಸಿನಿಮಾಗಳ ಸಂಖ್ಯೆ ಕಡಿಮೆಯಾಗುತ್ತದೆಯೋ ಏನೋ,

ಒಂದು ಕಡೆ ಆಸ್ತಿ ಬೇಕಾದಷ್ಟು ಸಂಪಾದನೆ ಮಾಡುತ್ತಿದ್ದಾರೆ. ಹಾಗಿರುವಾಗ ಒಂದು ಕಡೆ ಮಿತಿ ಅನ್ವಯಿಸುವುದು ಇನ್ನೊಂದು ಕಡೆ ಬಿಡುವುದು ಉಚಿತವಲ್ಲ. ಕೆಲವು ರಾಜ್ಯಗಳಲ್ಲಿ ಆಗಲೇ ಮಿತಿ ವಿಧಿಸಿದ್ದಾರೆ, ಕೆಲವು ಕಡೆ ವಿಧಿಸಿಲ್ಲ. ಆದುದರಿಂದ ಕೇಂದ್ರ ಸರಕಾರದವರು ಎಲ್ಲಾ ರಾಜ್ಯಗಳಿಗೂ ಅನ್ವಯಿಸುವಂತೆ ಒಂದೇ ಕಾಯಿದೆ ತಂದರೆ ಉತ್ತಮವೆಂದು ಕಾಣುವುದು. ಮುಖ್ಯವಾಗಿ ಆಸ್ತಿ ಮಿತಿ ವಿಧಿಸಬೇಕಾದ ಅವಶ್ಯಕತೆ ಇರುವುದು ಬೊಂಬಾಯಿ, ಕಲ್ಕತ್ತ, ಡೆಲ್ಲಿ ಮುಂತಾದ ದೊಡ್ಡ ಪಟ್ಟಣಗಳಲ್ಲಿ, ಬೇರೆ ರಾಜ್ಯಗಳಲ್ಲಿ ಹೆಚ್ಚಿನ ಅವಶ್ಯಕತೆ ಇಲ್ಲ. ವಿಧಿಸದಿದ್ದರೆ ಅಲ್ಲಿ ಹೆಚ್ಚು ಅನಾನುಕೂಲವಾಗುವುದಿಲ್ಲ, ಆದುದರಿಂದ ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ,

ಹಳ್ಳಿಗಳಲ್ಲಿರುವವರಿಗೆ ಒಂದು ಮಿತಿ ಹಾಕಿ ಪಟ್ಟಣಗಳಲ್ಲಿರುವವರಿಗೆ ಹೆಚ್ಚು ಸೌಲಭ್ಯ ಕೊಡುವುದು ಹೀಗೆ ತಾರತಮ್ಯ ಮಾಡುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಹಳ್ಳಿಗರೂ ಮುಂದೆ ಬರಬೇಕು, ಸುಖವಾಗಿರಬೇಕು, ಚನ್ನಾಗಿರಬೇಕು. ಪಟ್ಟಣಗರಿಗೆ ಅನುಕೂಲಮಾಡಿ ಹಳ್ಳಿಗರ ಕಡೆ ಗಮನ ಕೊಡದಿರುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಸಮತಾವಾದ ಜಾರಿಗೆ ತರುವುದಾಗಿ ಹೇಳುವಾಗ ಕೆಲವರಿಗೆ ಅನಾನುಕೂಲವಾಗುವಂತೆ ಮಾಡುವುದು ಸರಿಯಲ್ಲ ಎಂದು ಇಷ್ಟು ಹೇಳಿ ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತೇನೆ.

† ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ತಂದಿರುವ ಈ ನಿಲುವಳಿಯನ್ನು ಸಂಪೂರ್ಣವಾಗಿ ಸ್ವಾಗತಿಸಿ ಒಂದೆರಡು ಮಾತುಗಳನ್ನಾಡಲು ಬಯಸುತ್ತೇನೆ. ವಿರೋಧ ಪಕ್ಷದ ಮುಖಂಡರು ಕೆಲವರು ಮುಖ್ಯವಾಗಿ ಹೇಳಿದ್ದನ್ನು ನೋಡಿದರೆ ಇದನ್ನು ಕೇಂದ್ರ ಸರಕಾರಕ್ಕೆ ವಹಿಸಿರುವುದನ್ನು ವಿರೋಧಿಸಿದಾರೆ. ಇದರ ಹಿನ್ನೆಲೆ ಯಾರೂ ಅರ್ಥಮಾಡಿಕೊಂಡಿಲ್ಲ. ಒಂದೊಂದು ರಾಜ್ಯದವರು ಒಂದೊಂದು ರೀತಿಯಲ್ಲಿ ಈ ಸಂಬಂಧವಾದ ಕಾನೂನು ಮಾಡಿದರೆ ಅಡಚಣೆಯಾಗುವುದೆಂದು ಕೇಂದ್ರ ಸರಕಾರ ದೇಶಾದ್ಯಂತ ಒಂದೇ ರೀತಿಯ ಕಾನೂನನ್ನು ಆಸ್ತಿ ಮಿತಿಯ ಬಗ್ಗೆ ತರಬೇಕೆಂಬ ಉದ್ದೇಶದಿಂದ ಈ ನಿಲುವಳಿಯನ್ನು ತಂದರು.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ಭೂ ಸುಧಾರಣೆ ವಿಚಾರದಲ್ಲೇಕೆ ಹಾಗೆ ಮಾಡಲಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಒಂದೊಂದು ಪ್ರಾಂತದಲ್ಲಿ ಭೂಗುಣ ಮತ್ತು ಉತ್ಪತ್ತಿ ಒಂದೊಂದು ರೀತಿ ಇರುವುದು. ಕೆಲವು ಕಡೆ ಮಳೆ ಹೆಚ್ಚಾಗಿ ಬರುವುದು, ಕೆಲವು ಕಡೆ ಬರುವುದಿಲ್ಲ. ಇದೆಲ್ಲವನ್ನೂ ಗಮನಿಸಿ ಭೂ ಪರಿಮಿತಿಯನ್ನು ವಿಧಿಸುವ ಅವಕಾಶವನ್ನು ಸಂಸ್ಥಾನಗಳಿಗೆ ಕೊಡಲಾಗಿದೆ. ಪಟ್ಟಣದ ಆಸ್ತಿ ಪರಿಮಿತಿ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಒಂದೇ ರೀತಿ ಇರುವಂತೆ ಮಾಡುವುದು ಒಳ್ಳೆಯದು. ಇದನ್ನು ಗಮನಿಸಿ ನಮ್ಮ ರೆವೆನ್ಯೂ ಮಂತ್ರಿಗಳು ಬುದ್ಧಿ ಉಪಯೋಗಿಸಿ ಇದಕ್ಕೆ ಸಂಬಂಧಪಟ್ಟ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ವಹಿಸಲು ಉದ್ದೇಶಿಸಿದ್ದಾರೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂಬತಾಗಬಾರದು ಎಂದು ಈ ರೀತಿ ಮಾಡಿದ್ದಾರೆಂದು ಭಾವಿಸುತ್ತೇನೆ.

(ಶ್ರೀ ಎಸ್.ಎಂ. ಶಿರನಾಳಿ)

ಇವತ್ತು ಆಸ್ತಿಯ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ನೋಡಿದರೆ ಪರಿಹಾರ ಕಷ್ಟವೆಂದು ಕಾಣುತ್ತದೆ. ಕ್ಯಾಷ್ ಸಹ ಆಸ್ತಿ, ಸ್ವತ್ತು ಎಂದು ಒಂದು ಕೇಸಿನಲ್ಲಿ ತೀರ್ಪು ಬಂದಿದೆ. ನಮ್ಮ ಕೈಲಿರುವ ಹಣಕ್ಕೂ ಪರಿಮಿತಿ ಹಾಕುವಾಗ ಪರಿಹಾರ ಕೊಡುವ ಪ್ರಶ್ನೆ ಬರುವುದಿಲ್ಲ. ಪರಿಹಾರ ಕೊಟ್ಟರೆ ಆಸ್ತಿ ಸಮತೋಲನ ಮಾಡಿದಂತಾಗುವುದಿಲ್ಲ ಎಂದು ಒಪ್ಪಿಕೊಂಡಂತಾಗುವುದು. ಪರಿಹಾರದ ಪ್ರಶ್ನೆ ಇಲ್ಲಿ ಬರುವುದಿಲ್ಲ. ದೇವೇಗೌಡರು ಕೆಲವು ಟೀಕೆ ಮಾಡಿದರು. ನಮ್ಮ ಮುಂದಿರುವ ಸೂಚನೆಗೆ ವಿರೋಧಿಸಿದರು, ವಿರೋಧಿಸುವುದಿಲ್ಲ ಎಂದು ಹೇಳಿಕೊಂಡು ವಿರೋಧಿಸಿದರು. ಅದು ಸ್ವಾಭಾವಿಕ. ಅವರು ಹಿಂದೆ ಬೇರೆ ಪಕ್ಷದಲ್ಲಿದ್ದಾಗ ಹೇಳಿರುವುದು ಮರೆತಂತೆ ಕಾಣುವುದು. ಸಮತಾವಾದದ ಮಾತನಾಡುವ ಕಾಗೋಡು ತಿಮ್ಮಪ್ಪನವರಿಗೆ ಸರಕಾರವೇ ಎಲ್ಲವನ್ನೂ ಮಾಡುವುದಲ್ಲಾ ಎಂದು ಹೊಟ್ಟೇ ಉರಿ ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಮಾಜವಾದದ ಹೆಸರಿನಲ್ಲಿ ಟೊಳ್ಳು ಘೋಷಣೆ ನಿಮ್ಮದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕುರುಡನಿಗೆ ಆನೆ ಸ್ವರೂಪ ಗೊತ್ತಾಗಲಿಲ್ಲ ಕಾಲು ದಪ್ಪ ಎಂದೂ ಪರ್ವತವಿದ್ದ ಹಾಗಿದೆ ಎಂದೂ ಹೇಳಿದನಂತೆ. ನನ್ನ ಅಭಿಪ್ರಾಯದಲ್ಲಿ ಕುರುಡರು ಇರುವರು ನಿಮ್ಮಲ್ಲಿ ಈಗ ತಂದಿರುವ ಬಿಲ್ಲು ಸ್ವಾಗತಾರ್ಹವಾಗಿದೆ. ಪಟ್ಟಣಗಳಲ್ಲಿ ಆಸ್ತಿ ಮಿತಿ ಮಾಡುವುದರಿಂದ ಅನೇಕ ವಿಧವಾದ ಅನುಕೂಲವಾಗುವುದು.

ಇದರಿಂದ ತಪ್ಪಿಸಿಕೊಳ್ಳಲು ಅನೇಕ ಮಾರ್ಗಗಳಿವೆ. ನಮ್ಮಲ್ಲಿ ಜನರು ಒಂದು ಗಾದೆ ಹೇಳುತ್ತಾರೆ ' ನಾವು ಚಾಪೆಯ ಕೆಳಗೆ ನುಸುಳಿದರೆ ಅವರು ರಂಗೋಲೆ ಕೆಳಗೆ ನುಸುಳಿಕೊಂಡು ಹೋಗುತ್ತಾರೆ ' ಎಂದು ಈ ಹಿಂದೆ ಖಾಸಗೀ ವ್ಯಕ್ತಿಗಳು ಲೇವಾದೇವಿ ಮಾಡಬಾರದೆಂಬ ಒಂದು ಕಾನೂನನ್ನು ಮಾಡಲಾಯಿತು ಅದರಿಂದ ಆದುದೇನು ? ಶೇಕಡ 33 ರಂತೆ ಬಡ್ಡಿ ತೆಗೆದುಕೊಳ್ಳತಕ್ಕ ಫೈನಾನ್ಷಿಯಲ್ ಸಂಸ್ಥೆಗಳು ಹುಟ್ಟುವುದಕ್ಕೆ ಅದರಿಂದ ಅವಕಾಶ ಆಯಿತು, ಅಷ್ಟೆ. ಆದುದರಿಂದ ನಾವು ಈ ದಿವಸ ಕಾನೂನನ್ನು ಮಾಡಬಹುದು. ಮುಂದೆ ಅದರ ಹಿಡಿತದಿಂದ ತಪ್ಪಿಸಿಕೊಳ್ಳತಕ್ಕಂಥ ಜನರು ಹುಟ್ಟಬಹುದು. ಅಂಥ ಬುದ್ಧಿವಂತರು ಮುಂದೆ ಹುಟ್ಟಬಹುದು ಐದು ಲಕ್ಷ ರೂಪಾಯಿಗಳ ಆಸ್ತಿಯನ್ನು ಪತ್ರದಲ್ಲಿ ಬರೆಯುವ ಕಾಲಕ್ಕೆ ಅವರು ಅದರ ಬೆಲೆ 2 ಲಕ್ಷ ಎಂದು ಬರೆಸಬಹುದು. ಹೀಗೆ ಹತ್ತು ಲಕ್ಷ ರೂಪಾಯಿಗಳ ಆಸ್ತಿಯನ್ನು ಕೂಡ ಎರಡು ಲಕ್ಷಕ್ಕೆ ಬರೆಸಬಹುದು. ಆದುದರಿಂದ ಮುಂದೆ ಹೀಗೆ ಆಗುವುದನ್ನು ತಡೆಗಟ್ಟುವುದಕ್ಕೆ ನಾವು ಈಗಲೇ ಸರಿಯಾದ ಮಾರ್ಗವನ್ನು ಪರ್ಯಾಲೋಚಿಸಬೇಕಾಗಿದೆ.

ಆದರೆ ನಾವು ಈ ದಿವಸ ಏನು ಒಂದು ಆಸ್ತಿ ಎಂದು ಹೇಳುತ್ತೇವೆ—ಅದರ ವ್ಯಾಪ್ತಿಯಲ್ಲಿ ಬರೀ ಅಂಗಡಿಗಳು ಬರುತ್ತವೆಯೋ, ಮನೆಗಳು ಬರುತ್ತವೆಯೋ ಅಥವಾ ಮನೆಯಲ್ಲಿರತಕ್ಕ ಒಡವೆ ವಸ್ತುಗಳೂ ಅದರಲ್ಲಿ ಬರುತ್ತವೆಯೋ ಅನ್ನುವುದು ಇದರಲ್ಲಿ ಸರಿಯಾಗಿ ಅರ್ಥವಾಗುವುದಿಲ್ಲ. ಅನೇಕರ ಮನೆಯಲ್ಲಿ ಬಂಗಾರ ಮತ್ತು ಕಳ್ಳ ಹಣ ಬೇಕಾದಷ್ಟು ಇರುತ್ತದೆ. ಕೆಲವು ಅಧಿಕಾರಿಗಳ ಮನೆಯಲ್ಲಿ ಮತ್ತು ವರ್ತಕರ ಮನೆಯಲ್ಲಿ ಬೇಕಾದಷ್ಟು ಹಣ ಮತ್ತು ಬಂಗಾರ ಇರುತ್ತದೆ ಆದರೆ ಅವರನ್ನು ನೋಡಿದರೆ ಸಣ್ಣ ಮನೆಯಲ್ಲೇ ಇರುತ್ತಾರೆ. ಆದರೆ ಅವರಲ್ಲಿರತಕ್ಕ ಬಂಡವಾಳ ಯಾರಿಗೂ ಗೊತ್ತಾಗುವುದಿಲ್ಲ. ಇಂಥಾದ್ದನ್ನೆಲ್ಲಾ ಸರ್ಕಾರ ವಶಪಡಿಸಿಕೊಳ್ಳುವುದಕ್ಕೆ ಆಲೋಚನೆ ಮಾಡಬೇಕಾಗಿದೆ. ಆದರೆ ಇಂಥಾದ್ದನ್ನು ತಪ್ಪಿಸುವುದಕ್ಕೆ ನನಗೆ ಹೊಳೆಯತಕ್ಕದ್ದು ಒಂದೇ ಒಂದು ಮಾರ್ಗ ಎಂದರೆ ಹಾಲಿ ಇರತಕ್ಕ ಕರೆನ್ಸಿಯನ್ನು ಡಿಮಾನಿಟೈಜ್ ಮಾಡುವುದು ಹೊಸ ಕರೆನ್ಸಿಯನ್ನು ಜಾರಿಗೆ ತರುವುದು ಒಂದೇ ಮಾರ್ಗ. ಇವುಗಳನ್ನು ನಾವು ತಡೆಗಟ್ಟದಿದ್ದರೆ ನಮ್ಮ ಪ್ರಯತ್ನಗಳೆಲ್ಲಾ ಬಿಸಿಲ್ಗುದುರೆಗಳಾಗುತವೆ. ಆದರೆ ವಿರೋಧ ಪಕ್ಷದವರು ಇದನ್ನು ಈ ದಿವಸ ಎಷ್ಟೇ ವಿರೋಧಿಸಲಿ ಇಂದಲ್ಲಾ ನಾಳೆ ಇದನ್ನು ಇವರು ಒಪ್ಪಲೇ ಬೇಕಾಗುತ್ತದೆ. ಓಡತಕ್ಕ ಕುದುರೆಯನ್ನು ಯಾರು ತಡೆಯುವುದಕ್ಕೆ ಸಾಧ್ಯವಿಲ್ಲ. ಜನರು ಎಚ್ಚೆತ್ತಿದಾರೆ. ಅವರು ಹೇಗೆ ಹೋಗುತ್ತಾರೋ ನಾವೂ ಹಾಗೇ ಹೋಗಬೇಕು....

ಶ್ರೀ ಕೋಣಂದೂರು ಲಿಂಗಪ್ಪ.—ಅದರಲ್ಲಿ ಮಾನ್ಯ ಸದಸ್ಯರು ಬಹಳ ಜಾಣರು ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. - ಆದರೆ ಈ ದಿವಸ ನಾವು ಸಿನೀಮಾ ಮತ್ತು ಹೋಟಲುಗಳಿಗೆ ಒಂದು ವಿನಾಯಿತಿಯನ್ನು ಕೊಟ್ಟಿರುವುದರಿಂದ ಅನೇಕರ ಟೀಕೆಗಳಿಗೆ ಗುರಿಯಾಗಬೇಕಾಗಿದೆ. ಇದನ್ನು ಸೇರಿಸಿದ್ದರಿಂದ ಈ ಕಾನ್‌ಸೆಪ್ಟ್ ಆಫ್ ಪ್ರಾಪರ್ಟಿಗೆ ಗಧಾಪ್ರಹಾರ ಮಾಡಿದಂತಾಗಿದೆ. ಬೊಂಬಾಯಿಯಲ್ಲಿ ಒಂದು ಆಸ್ತಿ ಇದೆ. ಅದರಲ್ಲಿ ಅನೇಕ ಫ್ಲಾಟುಗಳಿರುತ್ತವೆ. ಅದರ ಬೆಲೆ 5 ಲಕ್ಷವಾಗುತ್ತದೆ. ಅದರಲ್ಲಿ 2 ಲಕ್ಷ ಹೇಗೆ ಭಾಗಮಾಡಿಕೊಳ್ಳುವುದು ಎಂದು ಕೇಳಬಹುದು. ಅದನ್ನು ನಾಲ್ಕು ಜನರ

ಹೆಸರಿನಲ್ಲಿ ಇಡುವುದಕ್ಕೆ ಅವಕಾಶವಿದೆ. ಸಿನೀಮಾ ಮತ್ತು ಹೋಟಲುಗಳನ್ನು ರಾಷ್ಟ್ರೀಕರಣ ಮಾಡಿ ಇಲ್ಲವೆ ಹತ್ತಾರು ಜನರ ಹೆಸರಲ್ಲಿ ಇರುವಂತೆ ಮಾಡಬೇಕೆಂದುಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ: ಮಾನ್ಯ ಕಂದಾಯ ಸಚಿವರು ಸಭೆಯ ಮುಂದೆ ಇಟ್ಟಿರತಕ್ಕ ಸರ್ಕಾರಿ ನಿರ್ಣಯದ ಅರ್ಥವನ್ನು ನಾನು ಮೆಚ್ಚುತ್ತೇನೆ, ಆದರೆ ಅದರ ಗುರಿಯನ್ನು ತಲುಪತಕ್ಕ ಬಗ್ಗೆ ಅನುಸರಿಸತಕ್ಕ ಹಾದಿ ಏನಿದೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಗುರಿಯ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಕಂದಾಯ ಸಚಿವರು ನಿರ್ಣಯವನ್ನು ಮಂಡಿಸತಕ್ಕ ಕಾಲದಲ್ಲಿ 252 ಆರ್ಟಿಕಲ್ಲನ್ನು ಉಲ್ಲೇಖನ ಮಾಡಿದ್ದಾರೆ. ಅದರಲ್ಲಿ ಈ ರೀತಿಯಾಗಿ ಹೇಳಿದೆ.—

"252 (1) : If it appears to the Legislatures of two or more States to be desirable that any of the matters with respect to which Parliament has no power to make laws for the States except as provided in articles 249 and 250 should be regulated in such States by Parliament by law, and if resolutions to that effect are passed by all the Houses of the Legislature of those States, it shall be lawful for Parliament to pass an Act for regulating that matter accordingly, and any Act so passed shall apply to such States and to any other State by which it is adopted afterwards by resolution passed in that behalf by the House or, where there are two Houses, by each of the Houses of Legislature of that State.

(2) : Any Act so passed by Parliament may be amended or repealed by an Act of Parliament passed or adopted in like manner but shall not as respects any State to which it applies, be amended or repealed by an Act of the Legislature of that State"

ಅಂದರೆ ಇಲ್ಲಿ ಹೇಳಿರತಕ್ಕ ಕಾನೂನಿನ ಪ್ರಶ್ನೆ ಏನಿದೆ ಎಂದರೆ—ಈಗಾಗಲೇ ಮಾನ್ಯ ಕೆ. ಪುಟ್ಟಸ್ವಾಮಿ ಅವರು ಹೇಳಿದ ಹಾಗೆ ಈ ಅಫಿಷಿಯಲ್ ರೆಸಲ್ಯೂಷನ್ನನ್ನು ನಮ್ಮ ಸರ್ಕಾರದವರೇ ತಯಾರು ಮಾಡಿದರೆ ಅಥವಾ ಬೇರೆ ರಾಷ್ಟ್ರಗಳಾದ ಮಹರಾಷ್ಟ್ರ ಮತ್ತು ಆಂಧ್ರದಲ್ಲಿ ಮಾಡಿದಂತೆ ಮಾಡಲಾಗಿದೆಯೋ ಅನ್ನುವುದನ್ನು ಕಂದಾಯ ಮಂತ್ರಿಗಳು ತಮ್ಮ ಭಾಷಣದಲ್ಲಿ ವಿವರಣೆ ಮಾಡಲಿಲ್ಲ. ಆದರೆ ಇಲ್ಲಿ ಕೊನೆಯ ಪ್ಯಾರಾದಲ್ಲಿ ಒಂದು ಅಂಶ ಏನು ಹೇಳಿದ್ದಾರೆ ಎಂದರೆ :—

"Now therefore, in pursuance of clause (1) of Article 252 of the Constitution of India, this Assembly hereby resolves that the imposition of ceiling on urban immovable property and acquisition of such property in excess of the ceiling limit with a view to utilising such excess for public purposes and all other matters connected therewith or incidental there to shall be regulated in this State by Parliament by Law.

ಇದನ್ನು ಯಾರು ಮೊದಲು ಮೂವ್ ಮಾಡಿದವರು ಅನ್ನುವುದೇ ಗೊತ್ತಾಗುತ್ತಿಲ್ಲ. ಮಾನ್ಯ ಸಚಿವರು ಈ ವಿಚಾರವನ್ನೇ ತಿಳಿದಿರುವುದಿಲ್ಲ. ಈ ಅಂಶವನ್ನು ಮಾನ್ಯ ಸಚಿವರು ಖಚಿತವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರೆಸೊಲ್ಯೂಷನ್ ಪಾರ್ಲಿಯಮೆಂಟಿನ ಆಫೀಸಿಗೆ ಹೋಗಿ ಅಲ್ಲಿ ಒಂದು ಡ್ರಾಫ್ಟ್ ಬಿಲ್ಲು ತಯಾರಾದ ನಂತರ ಅದರಲ್ಲಿ ಏನು ಸೇಲಿಯೆಂಟ್ ಫೀಚರ್ಸ್ ತರುತ್ತಾರೆಂಬುದನ್ನು ' ನೋಡಲು ಇಲ್ಲಿಗೆ ಅವರು ಮತ್ತೆ ಸರ್ಕುಲೇಟ್ ಮಾಡಬೇಕೆಂಬ ಅಂಶ ಇದರಲ್ಲಿಲ್ಲ.

೫–೩೦ ಪಿ.ಎಂ.

ಇದು ರಾಜ್ಯಾಂಗಬದ್ಧವಾಗಿಲ್ಲ. ಇದು ಒಂದು ಮಾತುಗಳ ಜೋಡನೆಯ (ಬಾಲ್ಡ್) ನಿರ್ಣಯದ ರೀತಿಯಾಗಿದೆ. ಇಂತಹ ಬರೀ ಟೊಳ್ಳು ನಿರ್ಣಯವನ್ನು ಇಲ್ಲಿ ಇಟ್ಟಿದ್ದಾರೆಂದು ಹೇಳಿದರೆ ನೀವು ಒಪ್ಪುತ್ತೀರೆಂದು ನಾನು ತಿಳಿದಿದ್ದೇನೆ. ಈಗ ಅರ್ಬನ್ ಪ್ರಾಪರ್ಟಿಮೇಲೆ ಮಿತಿಯನ್ನು ವಿಧಿಸಬೇಕೆಂಬ ಮಾತನ್ನು

(ಶ್ರೀ ಎಸ್. ಎಂ. ಶೀರನಾಳಿ)

ಒಪ್ಪಿದರೂ ಕೂಡ ಅದನ್ನು ಯಾವರೀತಿಯಲ್ಲಿ ನಿಗದಿಮಾಡಬೇಕೆಂಬ ಬಗ್ಗೆ ಸರ್ಕಾರ ಯೋಚನೆಮಾಡಬೇಕು. ಈ ವಿಚಾರವಾಗಿ ಮಾನ್ಯ ಶ್ರೀ ಚಂದ್ರಶೇಕರ್ ರವರು ಬಹಳ ಚೆನ್ನಾಗಿ ಪ್ರಸ್ತಾಪಮಾಡಿದರು. ಬರೀ ಟ್ಯಾಂಜಿಬಲ್ ಇಮ್ಮೂವಬಲ್ ಪ್ರಾಪರ್ಟಿ ಎಂದರೆ ಹೋಟೇಲ್, ಸಿನಿಮಾ ಇತ್ಯಾದಿಗಳು ಬರುತ್ತವೆ. ವೆಲ್ತ್ ಎಂದರೆ ಅವರು ಹೇಳಿದ ಹಾಗೆ ಕಪ್ಪು ಹಣ ಇತ್ಯಾದಿ ಬರುತ್ತದೆ. ಕರೆನ್ಸಿ ಲೆಕ್ಕದಲ್ಲಿ ಇದ್ದುದೂ ಸಹ ಬರುತ್ತದೆ. ಬ್ಲಾಕ್‌ಮನಿ ಅನ್‌ಅಕೌಂಟೆಡ್ ಮನಿಯಾಗುವುದರಿಂದ ಅದೂ ಕೂಡ ಬರುತ್ತದೆ. ಆದ್ದರಿಂದ ಅರ್ಬನ್ ಪ್ರಾಪರ್ಟಿ ಎನ್ನುವ ಪದ ಬರೀ ಮನೆಗಳಿಗೆ ಮಾತ್ರ ಅನ್ವಯಿಸುವುದು ಎಂಬ ಅರ್ಥ ಬರುತ್ತದೆಂದು ವಿವರಣೆ ಕೊಡುವುದು ಬಹಳ ತಪ್ಪು. ನನ್ನ ಅಭಿಪ್ರಾಯದಲ್ಲಿ ವೆಲ್ತ್ ಸಹ ಬರುತ್ತದೆ. ಬ್ಲಾಕ್‌ಮನಿ ಮತ್ತು ವೈಟ್ ಮನಿ ಇವು ಅಕೌಂಟೆಡ್ ಅಥವಾ ಅನ್‌ಅಕೌಂಟೆಡ್ ಆಗಿದ್ದರೂ ಅವೂ ಸಹ ಅದರಲ್ಲಿ ಬರುತ್ತದೆ. ಈ ವಿಚಾರವನ್ನು ಮಾನ್ಯ ಶ್ರೀ ಚಂದ್ರಶೇಕರ್ ಅವರು ಪ್ರಸ್ತಾಪಮಾಡಿದ್ದಾರೆ. ಇಂತಹ ಬ್ಲಾಕ್‌ಮನಿ ಹೆಚ್ಚಾಗಿರುವಾಗ ಸಮಾಜವಾದ ನೀತಿಯನ್ನು ಇಲ್ಲಿ ಜಾರಿಗೆತರಬೇಕೆಂದು ಇಟ್ಟುಕೊಂಡಿದ್ದಾರೆ. ಅದನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಒಂದುಸಾರಿ ಕಪ್ಪು ಹಣದ ಛಾಯೆ ಬಿದ್ದಾಗ ಯಾವ್ಯಾವ ಆಸ್ತಿ ಇಂಬ್ಯಾಲೆನ್ಸ್ ಬರುತ್ತದೆಂಬುದು ತಮಗೇ ವೇದ್ಯವಾಗಿದೆಯೆಂದು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ನಿರ್ಣಯದಲ್ಲಿ 2! 2ನೇ ಆರ್ಟಿಕಲ್‌ನ್ನು ಸುಮ್ಮನೆ ರಿಪೀಟ್ ಮಾಡುವುದು ಬಿಟ್ಟರೆ ಮತ್ತೇನೂ ಇಲ್ಲ. ನೀವು ಇಂತಹ ಒಂದು ಅಫಿಷಿಯಲ್ ರಿಜಲ್ಯೂಷನ್ ಈ ಸಭೆಯ ಮುಂದೆ ತರಬೇಕಾದರೆ, ನಿಮಗೆ ಅರ್ಬನ್ ಪ್ರಾಪರ್ಟಿ 2 ಲಕ್ಷ, 3 ಲಕ್ಷ ಅಥವ 5 ಲಕ್ಷ ಇರಲಿ ಎಂಬುದಾಗಿ ಹೇಳುವ ಒಂದು ಶಕ್ತಿ ಇದೆ. ಆದರೆ ಇದರಲ್ಲಿ ಅರ್ಬನ್ ಪ್ರಾಪರ್ಟಿ ಎಂದರೇನೆಂಬುದನ್ನು ಇದರಲ್ಲಿ ಪ್ರಸ್ತಾಪಮಾಡಲಿಲ್ಲ. ಆ ವಿಷಯದಲ್ಲಿ ಒಂದು ಅಂತ್ಯ ತೀರ್ಮಾನವನ್ನು ತೆಗೆದುಕೊಂಡು ಕ್ಲಾಜು 252 (1) ರ ಪ್ರಕಾರ ಹೇಳುವುದಕ್ಕೆ ನಿಮಗೆ ಯಾವ ತೊಂದರೆಯೂ ಇಲ್ಲ. ನಾವು ಈ ರೀತಿ ಇದರ ಬಗ್ಗೆ ಒಂದು ಲಿಮಿಟ್ಟನ್ನು ತರಬೇಕೆಂದಿದ್ದೇವೆ, ಈ ಸದನದ ಅಭಿಪ್ರಾಯ, ರಾಜ್ಯಸರ್ಕಾರದ ಅಭಿಪ್ರಾಯ ಏನಿದೆಯೆಂದು ಹೇಳುವುದಕ್ಕಾಗಲೀ ಅಥವಾ ಕೇಂದ್ರ ಸರ್ಕಾರಕ್ಕೆ ಕಾನೂನು ಪ್ರಕಾರ ನಿರ್ಧಾರ ಮಾಡಿ ಒಂದು ನಿರ್ಣಯವನ್ನು ಕಳುಹಿಸಿಕೊಡುವುದಕ್ಕಾಗಲೀ ನಿಮಗೇನೂ ಪ್ರೊಹಿಬಿಷನ್ ಇಲ್ಲ. ಅಂದಮೇಲೆ ಕಾನೂನು ಪ್ರಕಾರ ನೀವು ಏಕೆ ಇದರ ಬಗ್ಗೆ ನಿರ್ಧಾರ ಮಾಡಲು ಪ್ರಯತ್ನಮಾಡಲಿಲ್ಲವೆಂದು ನನ್ನ ಪ್ರಶ್ನೆ. ಪ್ರಾಪರ್ಟಿ ಎಂಬ ಪದದ ಅರ್ಥಕ್ಕೆ ನೀವು ವೆಲ್ತ್ ಎಂಬುದಾಗಿ ಸೇರಿಸಿ. ನಮ್ಮ ಮೈಮೇಲೆ ಏನೇನು ವೆಲ್ತ್ ಇದೆಯೆಂಬುದನ್ನೂ ಸಹ ಅದರಲ್ಲಿ ಹಾಕುವುದು ಒಳ್ಳೆಯದು. ಆದ್ದರಿಂದ ಮಾನ್ಯ ಸಚಿವರನ್ನು ನಾನು ಕೇಳಿಕೊಳ್ಳುವುದೇನೆಂದರೆ, ದಯಮಾಡಿ ಇದನ್ನು ಹಿಂದಕ್ಕೆ ತೆಗೆದು ಕೊಳ್ಳಿ, ಬರೀ ಇಂತಹ ಬಾಲ್ಡ್ ರಿಜಲ್ಯೂಷನ್ಸ್‌ನ್ನು ಇಲ್ಲಿ ತರುವುದು ಬೇಡ. ಅವನ್ನು ವಿವರವಾಗಿ ಕೊಡಿ. ಆಗ ಪಾಯಿಂಟ್ ಬೈ ಪಾಯಿಂಟ್ ಒಂದೊಂದಾಗಿ ತೆಗೆದುಕೊಂಡು ಚರ್ಚೆಮಾಡಿ ಒಂದು ನಿರ್ದಿಷ್ಟವಾಗಿ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಮಾಡಿದರೆ ಬಹಳ ಒಳ್ಳೆಯದು. ಈ ಒಂದು ವಾದವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಕನ್ಯಾಕುಮಾರಿಯಿಂದ ಹಿಮಾಚಲದವರೆಗೆ, ಪೂರ್ವ ದಿಂದ ಪಶ್ಚಿಮದವರೆಗೂ ಇದರ ಬಗ್ಗೆ ಏನೇನು ಹೇಳಿದ್ದಾರೆಂಬುದನ್ನು ತಿಳಿದು ಒಂದು ನಿರ್ದಿಷ್ಟವಾದ ನಿರ್ಣಯವನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಬಹಳ ಸಂತೋಷವಾಗುತ್ತಿತ್ತು. ಭೂಸುಧಾರಣೆ ಕಾನೂನು ಈಗ ಜಾರಿಗೆ ಬರಬೇಕಾಗಿದೆ. ಅದೇ ರೀತಿಯಲ್ಲಿ ಈ ವಿಷಯವೂ ಸಹ ಏಕೆ ಬರಲಿಲ್ಲ. ನೀವು ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಅಧಿಕಾರ ಕೊಡಬೇಕೆಂದರೇನು ? ಅದೇ ರೀತಿಯಲ್ಲಿ ಭೂ ಸುಧಾರಣೆಯ ವಿಷಯವನ್ನೂ ಸಹ ಅವರಿಗೇ ಬಿಡಬೇಕಾಗಿತ್ತು. ಇತ್ತೀಚೆಗೆ ನಗರದಲ್ಲಿರತಕ್ಕ ಜಮೀನಿನ ಬೆಲೆ ಬಹಳ ಜಾಸ್ತಿಯಾಗುತ್ತಿದೆ. ಆದರೂ ಅದರ ಲಕ್ಷಣ, ಆಧಾರದ ಮೇಲೆ ಒಂದು ಮಿತಿಯನ್ನು ನಿರ್ಧಾರ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ಇವತ್ತು ಇಲ್ಲಿರತಕ್ಕ ಒಂದು ಜಮೀನಿನ ಬೆಲೆಗೂ ದೆಹಲಿಯಲ್ಲಿರತಕ್ಕ ಒಂದು ಜಮೀನಿನ ಬೆಲೆಗೂ ಹೋಲಿಕೆಮಾಡಿದರೆ ಬಹಳವಾಗಿ ವ್ಯತ್ಯಾಸ ಬರುತ್ತದೆ. ಆದ್ದರಿಂದ ನಗರದ ಆಸ್ತಿಗಳ ಮೇಲೂ ಇದೇ ರೀತಿ ವ್ಯತ್ಯಾಸ ಬರುತ್ತದೆ. ಇನ್ನು ಯು. ಪಿ. ಮತ್ತು ಮಧ್ಯಪ್ರದೇಶಗಳನ್ನು ಉದಾಹರಣೆಗಾಗಿ ತೆಗೆದುಕೊಂಡರೆ ಯು ಪಿ. ಯಲ್ಲಿ ನಗರ ಆಸ್ತಿಯ ಮಿತಿಯನ್ನು ೩ ಲಕ್ಷ ರೂಪಾಯಿಗಳೆಂತಲೂ, ಮಧ್ಯಪ್ರದೇಶದಲ್ಲಿ ೪ ಲಕ್ಷ ರೂಪಾಯಿಗಳೆಂತಲೂ ತಂದು ಈಗಾಗಲೇ ಒಂದು ಬಿಲ್ ತಯಾರುಮಾಡಿದ್ದಾರೆ. ಅಲ್ಲಿ ಅವರು ಫ್ಯಾಮಿಲಿ ಯೂನಿಟ್ ಇಷ್ಟೇ ಎಂದು ನಿಗದಿಮಾಡಿದ್ದಾರೆ. ೧೦ ಸಾವಿರ ಜನಸಂಖ್ಯೆ ಇರತಕ್ಕ ಒಂದು ನಗರ ಮತ್ತು ಅದಕ್ಕಿಂತಲೂ ಹೆಚ್ಚಿಗೆ ಇರತಕ್ಕ ಇಂದು ನಗರಕ್ಕೆ ಈ ಕಾನೂನು ಅನ್ವಯಿಸುವುದಿಲ್ಲವೆಂದು ಇಟ್ಟಿದ್ದಾರೆ. ಇವತ್ತು ಜಮೀನಿನ ಬೆಲೆ ಎಷ್ಟರಮಟ್ಟಿಗೆ ನಾನು ಹೇಳಿದ ಹಾಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವ್ಯತ್ಯಾಸವಾಗುತ್ತದೋ ಹಾಗೆಯೇ ನಗರ ಆಸ್ತಿಯೂ ಮತ್ತು ಅದರ ಬೆಲೆಯೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ವ್ಯತ್ಯಾಸವಾಗುತ್ತದೆ. ಈಗ ಸ್ಟೇಟ್‌ನಲ್ಲಿರತಕ್ಕ ಈ ಕಾನೂನಿನ ಅಧಿಕಾರವನ್ನು ಕೇಂದ್ರಸರ್ಕಾರಕೆ ಕ್ಲಾಜು

೨೫೨ (೧) ರ ಪ್ರಕಾರ ಕೊಡಬೇಕೆಂದು ಹೇಳುತ್ತಿರಿ. ಆದೇ ರೀತಿಯಾಗಿ ಭೂಸುಧಾರಣೆಯ ಕಾನೂನಿನ ಅಧಿಕಾರವನ್ನೂ ಸಹ ಕೇಂದ್ರಸರ್ಕಾರಕ್ಕೆ ಹಾಗೂ ಪಾರ್ಲಿಮೆಂಟಿಗೆ ಕೊಡಬಹುದಾಗಿತ್ತು. ಈ ರೀತಿಯಾಗಿ ನಾನಾ ಕಡೆಗಳಲ್ಲಿ ಒಂದಕ್ಕೊಂದು ವ್ಯತ್ಯಾಸ ಬೆಲೆಯ ಆಧಾರದಮೇಲೆ ಇರುವಾಗ, ಜಮೀನಿಗೆ ಯಾವುದಾದರೂ ಒಂದು ಮಿತಿಯನ್ನು ಇಡುವಾಗ ಆದೇ ಮಿತಿಯನ್ನು ನಗರ ಆಸ್ತಿಗೂ ಇಡಬೇಕಾಗಿ ಬರುತ್ತದೆಂದು ಹೇಳುವ ವಾದ ಇದಕ್ಕೆ ಬರುವುದಿಲ್ಲ, ಅನ್ವಯಿಸುವುದಿಲ್ಲವೆಂಬುದು ನನ್ನ ಒಟ್ಟು ಮಾತಿನ ಅಭಿಪ್ರಾಯ. ಈಗಾಗಲೇ ಮಾತನಾಡಿದಂಥ ಕೆಲವು ಸದಸ್ಯರು ಹೇಳಿದ ಹಾಗೆ ಯಾವಾಗಲೂ ಅಧಿಕಾರದ ವಿಕೇಂದ್ರೀಕರಣವಾಗಬೇಕೆಂಬ ಕೂಗು ಈ ದೇಶದಲ್ಲಿ ಇದ್ದೇ ಇದೆ. ಕೇಂದ್ರಸರ್ಕಾರ ಈ ರಾಜ್ಯಾಂಗವನ್ನು ಹೆಚ್ಚಿಗೆ ಸ್ಕ್ರ್ಯಾಪ್ ಮಾಡಬೇಕು. ಹೊಸದಾಗಿ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿ ಬೇರೆ ರಚನೆಮಾಡಬೇಕಾದ ಪ್ರಸಂಗ ಮುಂದೆ ಬರಬಹುದೇನೋ ಗೊತ್ತಿಲ್ಲ. ಹಿಂದೆ ರಾಜ್ಯಾಂಗವನ್ನು ಬರೆದಾಗಲೇ ಹೆಚ್ಚಿನ ಅಧಿಕಾರಸಂಪೂರ್ಣವಾಗಿ ಬೇಕೆಂಬುದಾಗಿ ಕೇಂದ್ರದ ವಾದ ಇತ್ತು. ಅದಕ್ಕೋಸ್ಕರವಾಗಿಯೇ ಕ್ಲಾಜು ೨೪೯, ೨೫೦, ೨೫೨ (೧), ರ ಪ್ರಕಾರ ಪೂರ್ತಿ ಅಧಿಕಾರವನ್ನು ರಾಜ್ಯಸರ್ಕಾರಗಳಿಗೆ ಬಿಡದೆ ಕೇಂದ್ರಸರ್ಕಾರದವರೇ ಇಟ್ಟುಕೊಂಡಿದಾರೆ ಆಯಾ ರಾಜ್ಯಗಳ ವಿಧಾನಸಭೆಯಲ್ಲಿ ಅವು ಬೆಳಕಿಗೆ ಬಾರದೇ ಇರುವ ರೀತಿಯಲ್ಲಿ ಆಯಾ ರಾಜ್ಯಗಳಲ್ಲಿ ಈ ಕಾನೂನುಗಳ ಪ್ರಕಾರ .ರತಕ್ಕ ಎಲ್ಲ ಸಂಪೂರ್ಣ ಅಧಿಕಾರವನ್ನು ನಾನಾ ರೀತಿಯಲ್ಲಿ ಅವರೇ ದುರುಪಯೋಗಮಾಡಿಕೊಂಡಿದ್ದಾರೆ. ೨೫೨ (೧) ಕ್ಲಾಜು ಪ್ರಕಾರ ನಿಮಗೆ ಇಂತಹ ವಿಷಯಗಳ ಬಗ್ಗೆ ನಿಮಗೆ ಅಧಿಕಾರವಿಲ್ಲ ನಿಮಗೆ ನಿಜವಾಗಿ ಧೈರ್ಯವಿದ್ದರೆ, ಸಮಾಜವಾದದಲ್ಲಿ ನಿಮಗೆ ನಂಬಿಕೆ ಇದ್ದರೆ ಕೇಂದ್ರಸರ್ಕಾರಕ್ಕೆ ಈ ನಿರ್ಣಯವನ್ನು ಏಕೆ ಕಳುಹಿಸಬೇಕೆಂದು ಮಾಡುತ್ತೀರಿ ? ನೀವೇ ಒಂದು ನಿರ್ಣಯ ತೆಗೆದುಕೊಂಡು ಬಂದು ನಗರದಲ್ಲಿ ೨ ಲಕ್ಷದ ಆಸ್ತಿ ಮಿತಿ ನಿರ್ಧಾರಮಾಡುವುದಕ್ಕೆ ನಮಗೆ ಅಧಿಕಾರವಿದೆಯೆಂದು ನೀವೇ ಹೇಳಬಹುದಾಗಿತ್ತು. ಆ ಮಾತನ್ನು ಹೇಳದೆ ನಮ್ಮ ರಾಜ್ಯಸರ್ಕಾರಕ್ಕೆ ಹಾಗೂ ಈ ಸದನಕ್ಕೆ ಇರುವ ಅಧಿಕಾರವನ್ನು ಮೊಟಕು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ಕೆಲವಾರು ಮುಖ್ಯವಾದ ಇಲಾಖೆಗಳ ವಿಚಾರವನ್ನು ಅಂದರೆ ಡಿಫೆನ್ಸ್ ಮತ್ತು ಕಮ್ಯೂನಿಕೇಷನ್ ವಿಷಯಗಳನ್ನು ಬಿಟ್ಟರೆ ಉಳಿದ ವಿಷಯಗಳ ಬಗ್ಗೆ ರಾಜ್ಯಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಬೇಕು ಎಂಬ ವಾದವನ್ನು ಮಾಡುವುದಕ್ಕೆ ಬದಲು, ನೀವು ಆ ವಾದಕ್ಕೆ ತದ್ವಿರುದ್ಧವಾಗಿ ನಮ್ಮ ಹಕ್ಕನ್ನು ಮೊಟಕುಗೊಳಿಸಿ, ಆಂತಹ ಒಂದು ಅಧಿಕಾರವನ್ನು ಈಗ ಪಾರ್ಲಿಮೆಂಟಿಗೆ ಕೊಡುವುದಕ್ಕೆ ಹೋಗಿದ್ದೀರಿ. ಆದರೆ ನಾನು ಪಾರ್ಲಿಮೆಂಟಿಗೆ ಇರತಕ್ಕ ಅಧಿಕಾರವನ್ನು ನಾನು ಪ್ರಶ್ನೆಮಾಡುವುದಿಲ್ಲ. ಅವರಿಗೆ ಏಕೆ ನಮ್ಮ ಅಧಿಕಾರವನ್ನು ಕೊಡುತ್ತಿದ್ದೀರಿ ? ಇದರ ಬಗ್ಗೆ ಬೇರೊಂದು ನಿರ್ಣಯವನ್ನು ಸರಿಯಾಗಿ ನೀವು ಇಲ್ಲಿ ತಂದಿದ್ದರೆ ಬಹಳ ಚೆನ್ನಾಗಿತ್ತು. ದಯಮಾಡಿ ಇದನ್ನು ಈಗ ತಂದಿರುವ ನಿರ್ಣಯವನ್ನು ವಿತ್‌ಡ್ರಾ ಮಾಡಬೇಕು. ಇಲ್ಲದಿದ್ದರೆ ದೆಹಲಿಯಲ್ಲಿ ಕೂತಿರುವ ಪಾರ್ಲಿಮೆಂಟ್ ಸ್ನೇಹಿತರು ನಮ್ಮನ್ನು ನೋಡಿ ನಗುತ್ತಾರೆ. ಆದ್ದರಿಂದ ಈಗಿರತಕ್ಕ ನಿರ್ಣಯವನ್ನು ವಿತ್‌ಡ್ರಾ ಮಾಡಿ ಬೇರೆ ಒಂದು ನಿರ್ಣಯವನ್ನು ಡ್ರಾಫ್ಟ್ ಮಾಡಿ. ನಾನು ಮೇಲೆ ಹೇಳಿದಂತೆ ಎಲ್ಲ ವಿಷಯಗಳನ್ನು ಅಳವಡಿಸಿ, ಇಲ್ಲಿಯೇ ಒಂದು ಕಾನೂನನ್ನು ಇದರ ಬಗ್ಗೆ ಮಾಡುತ್ತೇವೆಂದು ಒತ್ತಾಯಮಾಡಿ ಈಗಿರತಕ್ಕ ಅಫಿಷಿಯಲ್ ರೆಸಲ್ಯೂಷನ್ನಿಗೆ ಬೇರೆಬೇರೆ ವಿವರಗಳನ್ನು ಕೊಡಿ. ನಮಗೆ ಇರತಕ್ಕ ಕಾನೂನನ್ನು ನಾವು ಸದುಪಯೋಗಪಡಿಸಿಕೊಳ್ಳಬೇಕು. ಇದು ಒಂದು ಕಾನೂನು ವಿಕೇಂದ್ರೀಕರಣ ಪ್ರಶ್ನೆ : ನಮ್ಮ ರಾಜ್ಯದ ಸದನದ ಪ್ರಶ್ನೆ. ಇವೊತ್ತಿನ ದಿವಸ ಪಂಜಾಬ್, ಬಿಹಾರ್, ಯು. ಪಿ. ಇತ್ಯಾದಿ ಕಡೆಗಳಲ್ಲಿ ಏನು ಮಾಡಿದ್ದಾರೆಂದರೆ, ಅವರು ಅರ್ಬನ್ ಪ್ರಾಪರ್ಟಿಯ ಮೇಲೆ ಇಷ್ಟು ಸೀಲಿಂಗನ್ನು ಹಾಕಬೇಕೆಂಬುದರ ಬಗ್ಗೆ ಅಭಿಪ್ರಾಯವನ್ನು ಮಾತ್ರ ವ್ಯಕ್ತಪಡಿಸಿದ್ದಾರೆ. ಆದರೆ ನಮ್ಮ ರಾಜ್ಯದವರು ಏಕೆ ಈ ರೀತಿ ರಿಸೊಲ್ಯೂಶನ್ ಮಾಡಬೇಕು I ನಾವೇ ಸ್ವತಃ ಒಂದು ಕಾನೂನನ್ನು ಇಲ್ಲಿ ಮಾಡುವುದಕ್ಕೆ ಅವಕಾಶ ಇದೆ. ನಮ್ಮ ದೇಶದಲ್ಲಿ ಇವತ್ತು ಭಾರೀ ಹಣ ಶೇಖರಣೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ನೀವು ತಕ್ಷಣ ಕರ್ಬ್ ಮಾಡದಿದ್ದರೆ ಅಥವಾ ನಿಲ್ಲಿಸದಿದ್ದರೆ. ಈ ಇಂಬ್ಯಾಲೆನ್ಸ್ ಏನಿದೆ, ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮಗೆ ನಿಜವಾಗಿಯೂ ಸಮಾಜವಾದದಲ್ಲಿ ನಂಬಿಕೆ ಇದ್ದರೆ, ಗರೀಬಿ ಹಟಾವೋ ಮಾಡಬೇಕೆಂಬ ಇಚ್ಛೆ ಇದ್ದರೆ, ಇದರ ಬಗ್ಗೆ ಕಾನೂನನ್ನು ಮಾಡಲು ಒಂದು ಬಿಲ್ಲನ್ನು ಕೂಡಲೇ ತೆಗೆದುಕೊಂಡು ಬನ್ನಿ. ಆಗ ಈ ರಿಸೊಲ್ಯೂಶನ್‌ನ್ನು ನಾನು ಮೆಚ್ಚುತ್ತೇನೆ ಮತ್ತು ಇದಕ್ಕೆ ಬೆಂಬಲ ಕೊಡುತ್ತೇನೆ. ಆದರೆ ಸ್ಟೇಟ್ ಲೆಜಿಸ್ಲೇಚರ್‌ನ ಹಕ್ಕನ್ನು ಇದು ಮೊಟಕು ಗೊಳಿಸುವುದರಿಂದ ನಾನು ಸಂಪೂರ್ಣವಾಗಿ ಇದನ್ನು ವಿರೋಧ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).– ಮಾನ್ಯ ಅಧ್ಯಕ್ಷರೇ, ಕಂದಾಯ ಸಚಿವರು ಏನೊಂದು ನಿರ್ಣಯವನ್ನು ಇಟ್ಟಿದ್ದಾರೆ, ಅದು ಬಹಳ ಮುಖ್ಯವಾದ ನಿರ್ಣಯವೆಂದು ನನಗನಿಸುತ್ತದೆ. ಮುಖ್ಯವಾದ ನಿರ್ಣಯವೆಂದರೆ ಇದು ಒಂದು ನಗರ ಆಸ್ತಿಯ ಮೇಲೆ ಮಿತಿಯನ್ನು ಹೊರಿಸುವಂತಹ ನಿರ್ಣಯ. ಇದರಲ್ಲಿ ಎರಡು ತರಹದ ವಿಚಾರಗಳಿವೆ. ಒಂದನೆಯದು ಏನೆಂದರೆ ನಗರಾಸ್ತಿಯ

(ಶ್ರೀ ಎಂ.ಎಸ್. ಕೃಷ್ಣನ್)

ಮಿತಿಯನ್ನು ಸರ್ಕಾರ ಒಪ್ಪಿಕೊಂಡಿದೆ ಎನ್ನುವ ಅಂಶ. ಎರಡನೆಯದು ಹಾಗೆ ಒಪ್ಪಿಕೊಂಡರೂ ಅದನ್ನು ನಾವು ಮಾಡುವುದಿಲ್ಲ, ಕೇಂದ್ರ ಸರ್ಕಾರಕ್ಕೆ ಒಪ್ಪಿಸಬೇಕು ಎನ್ನುವ ಅಂಶ. ಮೊದಲನೆಯ ಬಗ್ಗೆ ಹೇಳುವುದಾದರೆ ಈ ತರಹ ಕಾನೂನನ್ನು ಪಾರ್ಲಿಮೆಂಟಿಗೆ ಕೊಡವುದಕ್ಕೆ ಘಟನಾವಳಿಯ ಪ್ರಕಾರ ಕಾನೂನು ಇದ್ದರೂ ಆ ರೀತಿ ಪಾರ್ಲಿಮೆಂಟಿಗೆ ಕೊಡಬೇಕಾಗಿತ್ತೇ, ಅಥವಾ ಇದಕ್ಕೆ ಸಮಂಜಸವಾದ ಕಾರಣಗಳಿವೆಯೋ ಎಂಬುದು ನನ್ನ ಪ್ರಶ್ನೆ ಇವರು ಹೇಳಿರುವ ಶಬ್ದದ ಪ್ರಕಾರ ಅದು ಈ ರೀತಿ ಇದೆ :—

> "And whereas for the purpose of securing uniformity in legislation, it is desirable that such legislation should be undertaken by Parliament."

ಎಂದು ಹೇಳಿದ್ದಾರೆ. ಶಾಸನವನ್ನು ನಗರಾಸ್ತಿಯ ಬಗ್ಗೆ ಪಾರ್ಲಿಮೆಂಟ್ ತೆಗೆದುಕೊಂಡು ಬರುವುದು ಬಹಳ ಕಷ್ಟವೆಂದು ನನ್ನ ಅಭಿಪ್ರಾಯ. ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಮೊದಲನೆಯ ಕಾರಣವೇನೆಂದರೆ, ನಗರಾಸ್ತಿಯ ಮಿತಿಯ ಬಗ್ಗೆ ಈಗ ಹಲವಾರು ರಾಜ್ಯಗಳು ಶಾಸನವನ್ನು ಮಾಡಿವೆ. ಯು. ಪಿ. ಯವರು ಮೂರು ಲಕ್ಷ ರೂಪಾಯಿ ಇರಬೇಕೆಂದು ಹೇಳಿದ್ದಾರೆ, ಪಂಜಾಬಿನಲ್ಲಿ ಎರಡೂವರೆ ಲಕ್ಷ ರೂಪಾಯಿ, ರಾಜಸ್ಥಾನದಲ್ಲಿ ಮೂರು ಲಕ್ಷ ರೂಪಾಯಿ ಮಧ್ಯಪ್ರದೇಶದಲ್ಲಿ ೩-೪-೫ ಲಕ್ಷ ರೂಪಾಯಿ ಮತ್ತು ಬಿಹಾರದಲ್ಲಿ ೨-೩ ಲಕ್ಷ ರೂಪಾಯಿ ಹೀಗೆ ಕಾನೂನುಗಳನ್ನು ಮಾಡಿದ್ದಾರೆ. ಇದರಿಂದ ಎರಡು ಅರ್ಥ ಕಲ್ಪನೆ ಮಾಡಬಹುದು. ಇವರು ಒಂದೇ ರೀತಿಯಲ್ಲಿರುವ ಹಾಗೆ ಕಾನೂನು ಮಾಡುತ್ತೇವೆಂದು ಹೇಳಬಹುದು. ಆದರೆ ವಿಧಾನ ಸಭೆಯ ಚರ್ಚೆಯಲ್ಲಿ ಉಂಟಾದ ಅಭಿಪ್ರಾಯವನ್ನು ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿರುವ ಪರಿಸ್ಥಿತಿ ಇನ್ನೊಂದು ರಾಜ್ಯದಲ್ಲಿ ಇಲ್ಲ ; ನಮ್ಮ ನಗರದಲ್ಲಿರುವ ಪರಿಸ್ಥಿತಿ ಇನ್ನೊಂದು ನಗರದಲ್ಲಿಲ್ಲಾ. ಬೊಂಬಾಯಿ ನಗರದ ಮಿತಿ ಬೆಂಗಳೂರು ನಗರಕ್ಕೆ ಅನ್ವಯಿಸುವುದಿಲ್ಲ. ಬೊಂಬಾಯಿ ನಗರದಲ್ಲಾದರು ನಮ್ಮ ರಾಷ್ಟ್ರದ ಮುಖ್ಯ ಬಂಡವಾಳ ಶಾಹಿಗಳು, ಭಾರೀ ಭಾರೀ ಶ್ರೀಮಂತರು ಮತ್ತು ಕೋಟ್ಯಾಧೀಶರು ಇದ್ದಾರೆ. ಆದೇ ರೀತಿ ಕಲ್ಕತ್ತ ದಲ್ಲಿಯೂ ಇಂಥವರು ಇದ್ದಾರೆ. ಆದರೆ ಬೆಂಗಳೂರು ನಗರದಲ್ಲಿ ಅಂಥ ಶ್ರೀಮಂತರು ಇದ್ದಾರೆಂದು ನಾನು ಭಾವಿಸುವುದಿಲ್ಲ. ಇತ್ತೀಚೆಗೆ ಕೈಗಾರಿಕೆಗಳು ಇಲ್ಲಿ ಬೆಳೆಯುತ್ತಾ ಇವೆ. ಬೆಂಗಳೂರು ನಗರದ ಪರಿಸ್ಥಿತಿ ಬೇರೇ ರೀತಿಯಲ್ಲಿಯೇ ಇದೆ.

ಅದೇ ರೀತಿಯಲ್ಲಿ ಇಲ್ಲಿ ಎಗ್ಸೆಮ್ಷನ್ ವಿಚಾರದಲ್ಲಿಯೂ ಚರ್ಚೆ ನಡೆದಿದೆ. ಯಾರಿಗೆ ವಿನಾಯಿತಿ ಕೊಡಬೇಕೆಂಬುದರ ಬಗ್ಗೆಯೂ ಚರ್ಚೆ. ನಡೆದಿದೆ. ಹೀಗಿರಬೇಕಾದರೆ, ಅದನ್ನು ಅಳವಡಿಸಿಕೊಂಡು ಏಕರೂಪತೆಯ ಶಾಸನವನ್ನು ತೆಗೆದುಕೊಂಡು ಬರುವುದಕ್ಕೆ ಪಾರ್ಲಿಮೆಂಟಿಗೂ ಅದು ಕಷ್ಟಕರವಾದ ಕೆಲಸ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಎರಡನೆಯದು ಏನೆಂದರೆ ಒಂದು ಪಕ್ಷ ಈ ರೀತಿ ಯಾದ ಹಕ್ಕು ಅವರಿಗೆ ಕೊಡಬೇಕು ಎನ್ನುವ ಪ್ರಶ್ನೆ ಮಾನ್ಯ ಬಂಗಾರಪ್ಪನವರು ಒಂದು ವಿಷಯ ಹೇಳಿದರು, ನಾವೇ ನಮ್ಮ ಹಕ್ಕನ್ನು ಮೊಟಕು ಮಾಡಿದಂತಾಗಲಿಲ್ಲವೇ ? ಆ ಮೇಲೆ ನಾವು ಮಾತ ನಾಡುವುದಕ್ಕೆ ಆಗುತ್ತದೆಯೇ ? ಕೇಂದ್ರದವರು ಶಾಸನ ಮಾಡಿಬಿಟ್ಟು ನಾವು ಅದಕ್ಕೆ ರಬ್ಬರ್ ಸ್ಟಾಂಪ್ ಹಾಕಿದರೆ ನಮ್ಮ ಅಧಿಕಾರವನ್ನು ನಾವು ಚಲಾಯಿಸಿದ ಹಾಗೆ ಆಗುವುದಿಲ್ಲ. ಹಾಗೆ ಮಾಡುವುದರಿಂದ ನಮ್ಮ ಅಧಿಕಾರ ಏನಿದೆ ಅದು ಹೋದಂತೆ ಆಗುತ್ತದೆ. ಮಾನ್ಯ ದೇವರಾಜ ಅರಸರು ಒಂದು ಮಾತನ್ನು ಡೆಕ್ಕನ್ ಹೆರಾಲ್ಡ್ ಪೇಪರಿನಲ್ಲಿ ೫—೫—೭೨ ರಂದು ಈ ರೀತಿ ಹೇಳಿದ್ದಾರೆ :

'He made it clear that while the Government would not be rigid to the point of being brittle about the ceiling, there could be no question of a sizable upward revision It will definitely not be Rs. five lakhs or even Rs. four lakhs. Our intention is to keep the ceiling as low as possible and the variation at the most will not be more than Rs. one lakh.

I will not say further. I will go only so far and not an inch further, but I know my colleagues in the Government and they have fully backed me on this. I am prepared to take the risk and face the consequences.

ಏತಕ್ಕೆಂದರೆ ಅವರು ಇದನ್ನು ಪಾರ್ಟಿಯಲ್ಲಿ ತೀರ್ಮಾನ ಮಾಡಿದ್ದೇವೆ ಎಂದು ಮೇ ತಿಂಗಳಿನಲ್ಲಿ ಹೇಳಿದ್ದಾರೆ. ಅದನ್ನು ಕಾರ್ಯಗತ ಮಾಡಬೇಕಾಗಿತ್ತು ಎಂದು ನನ್ನ ಅಭಿಪ್ರಾಯ.

ಎರಡನೆಯದಾಗಿ ನನಗೆ ತಿಳಿದ ಮಟ್ಟಿಗೆ ಅರ್ಬನ್ ಸೀಲಿಂಗ್ ಪ್ರಾಪರ್ಟಿಯ ಒಂದು ಶಾಸನವನ್ನು ಇವರು ಮಾಡಿ ಇಟ್ಟಿದ್ದರು. ಅದರಲ್ಲಿ ತೊಡಕುಗಳು ಬಂದಿವೆ. ಭಿನ್ನಾಭಿಪ್ರಾಯಗಳು ಬಂದಿವೆ. ಆ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ಶಕ್ತಿ ಇಲ್ಲದೆ ಅದನ್ನು ಕಾರ್ಯರೂಪಕ್ಕೆ ತೆಗೆದುಕೊಂಡು ಬಂದಿಲ್ಲವೆಂದು ನಾನು ಆರೋಪಣೆ ಮಾಡುತ್ತೇನೆ. ಇದು ಪಾರ್ಲಿಮೆಂಟಿಗೆ ಹೋಗಬೇಕು ಎಂದು ಹೇಳುತ್ತಾರೆ. ನಮ್ಮ ಸರ್ಕಾರದವರು ತಯಾರು ಮಾಡಿರುವ ಒಂದು ಡ್ರಾಫ್ಟ್ ಬಿಲ್ ಈಗಾಗಲೇ ಇದೆ. ಅದನ್ನು ಏತಕ್ಕೆ ತೆಗೆದುಕೊಂಡು ಬಂದು ಚರ್ಚೆ ಮಾಡಬಾರದು ? ಈಗಾಗಲೇ ಬೇರೆ ರಾಜ್ಯಗಳು ಈ ಆಸ್ತಿಮಿತಿಗೆ ಸಂಬಂಧಪಟ್ಟ ಶಾಸನವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಶಾಸನಗಳಿಗೆ ಪ್ರೆಸಿಡೆಂಟರ ಅಸೆಂಟ್ ಸಿಕ್ಕಿದೆ ಎಂಬುದು ನನಗೆ ಗೊತ್ತಿಲ್ಲ. ಈಗ ನಮ್ಮ ರಾಜ್ಯದಲ್ಲಿ ಈ ಆಸ್ತಿಮಿತಿಗೆ ಸಂಬಂಧಪಟ್ಟ ಬಿಲ್ಲನ್ನು ರಚಿಸಿದಮೇಲೆ ಅದನ್ನಾದರೂ ಈ ಸಭೆಯಮುಂದೆ ತರಬೇಕಾಗಿತ್ತು. ಅದನ್ನು ಈ ಸಭೆಯಲ್ಲಿ ತಂದು ಚರ್ಚೆ ಮಾಡಿದ್ದರೆ ಚೆನ್ನಾಗಿತ್ತು. ನಾನು ಇಷ್ಟು ಮಾತ್ರ ಹೇಳುತ್ತೇನೆ. ಈ ನಿರ್ಣಯದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟ ಪಡುವುದಿಲ್ಲ. ಇದರಲ್ಲಿ ಎರೆಡು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಅದನ್ನು ಮಾಡಲೇ ಬೇಕಾಗಿತ್ತು. ಶ್ರೀಮಾನ್ ಶಿರನಾಳಿ ಚಂದ್ರಶೇಖರ್ ಅವರು ಇದು ಒಂದು ಸೋಷಲಿಸ್ಟ್ ಮೆಜರ್ ಎಂದು ಹೇಳಿದರು. ಸೋಷಲಿಸ್ ಮೆಜರ್ ಎಂದರೆ ಎಲ್ಲಾ ಭೂಮಿ ಆಸ್ತಿಯೂ ಸರ್ಕಾರದ ಒಡೆತನಕ್ಕೆ ಸೇರಬೇಕು. ಅದು ಸೋಷಲಿಸ್ಟ್ ಮೆಜರ್. ಅಂಥಾ ಒಂದು ಲೆಜಿಸ್ಲೇಷನ್ ಅನ್ನು ಶ್ರೀಮಾನ್ ಹುಚ್ಚಮಾಸ್ತಿಗೌಡರು ತರುವುದಕ್ಕೆ ತಯಾರಾದ್ದಗಿರೆ ನಾನು ಅವರಿಗೆ ಶಹಭಾಷ್‌ಗಿರಿಯನ್ನು ಕೊಡುತ್ತಿದ್ದೆ. ನನ್ನ ಪ್ರಶ್ನೆ ಏನಂದರೆ ಸಮಾಜವಾದಿ ತತ್ವಕ್ಕನುಗುಣವಾಗಿ ಲ್ಯಾಂಡ್ ಸೀಲಿಂಗ್ ಬಿಲ್ ತೆಗೆದುಕೊಂಡು ಬಂದಿದ್ದೇವೆ ಎಂದರೆ ನಾನು ಒಪ್ಪುವುದಿಲ್ಲ. ಸಮಾಜವಾದಿ ಕಾರ್ಯಕ್ರಮ ಎಂದರೆ ಸಮಾಜದ ಎಲ್ಲಾ ಆಸ್ತಿಯೂ ರಾಷ್ಟ್ರಕ್ಕೆ ಸರ್ಕಾರಕ್ಕೆ ಸೇರಬೇಕು. ಅದು ನಿಮ್ಮಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಬೇಕಾದರೆ ಹೊಸಪರಿಸ್ಥಿತಿ ಬರಬೇಕು. ವರ್ಗಸಂಬಂಧ ಆಸ್ತಿಗೆ ಸಂಬಂಧಪಟ್ಟ ಬಿಲ್ಲು ಬದಲಾವಣೆ ಆದರೆ ಮಾತ್ರ ಸಮಾಜವಾದಿ ಕಾರ್ಯಕ್ರಮ ಬರುವುದಕ್ಕೆ ಸಾಧ್ಯ. ಆದರೆ ಈಗ ಸರ್ಕಾರದವರು ಏನೊಂದು ಮೆಷರ್ ತೆಗೆದುಕೊಂಡು ಬಂದಿದ್ದಾರೆ ಇದನ್ನು ಪ್ರತಿಗಾಮಿ ಹೆಜ್ಜೆ ಎಂದು ಹೇಳುವುದಿಲ್ಲ. ಪುರೋಗಾಮಿ ಹೆಜ್ಜೆ ಎಂದು ಹೇಳಬೇಕಾಗುತ್ತದೆ. ಒಂದು ಸಣ್ಣ ಹೆಜ್ಜೆ ಇಡುವುದಕ್ಕೆ ಹೊರಟಿದ್ದಾರೆ. ಅಷ್ಟು ಮಾತ್ರ ಸಂತೋಷ. ಇದನ್ನು ಮೊದಲೇ ತೆಗೆದುಕೊಂಡು ಬರಬೇಕಾಗಿತ್ತು. ಜನಗಳು ಸಾಯುವುದಕ್ಕೆ ಮುಂಚೆ ಅವರನ್ನು ಬದುಕಿಸಿ ಎಂದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ಮುಂದೆ ಹೋಗಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ಮಧ್ಯಪ್ರದೇಶ ಯು. ಪಿ. ಪಂಜಾಬ್ ಈ ರಾಜ್ಯಗಳವರು ಈ ಆಸ್ತಿಮಿತಿಯ ಬಗ್ಗೆ ಮಾಡಿರುವ ಶಾಸನಗಳನ್ನು ನಾನು ಓದಿದ್ದೇನೆ. ಅವುಗಳನ್ನು ನೋಡಿದ್ದರಲ್ಲಿ ಅವುಗಳಲ್ಲಿ ಕೆಲವು ಒಳ್ಳೆಯ ಅಂಶಗಳು ಇವೆ. ಇನ್ನೊಂದುಕಡೆ ಅನೇಕ ತೊಂದರೆಗಳು ಸಹ ಇವೆ ಎನ್ನುವುದನ್ನು ನಾನು ತಮಗೆ ಹೇಳಬೇಕಾಗಿದೆ. ಇದರಲ್ಲಿ ಎರಡು ಅಂಶಗಳನ್ನು ನಾನು ವಿವರಿಸಬೇಕಾಗಿದೆ. ಇದರಲ್ಲಿ ಮೊದಲನೆಯ ಅಂಶ ಏನು ಎಂದರೆ ಈಗ ಸಮಾಜದಲ್ಲಿ ಏರುಪೇರುಗಳು ಇನಿವೆ ಇದರಲ್ಲಿ ಮುಖ್ಯವಾಗಿ ಶ್ರೀಮಂತರು ಗುತ್ತೇದಾರರು ಒಂದುಕಡೆ. ನಿರುದ್ಯೋಗಿಗಳು ಏನೂ ಇಲ್ಲದೆ ಇರುವವರು ಒಂದುಕಡೆ ಇದ್ದಾರೆ. ಇದರಲ್ಲಿ ಏರುಪೇರುಗಳನ್ನು, ಸ್ವಲ್ಪಮಟ್ಟಿಗೆ ತೊಡೆದು ಹಾಕಬೇಕು. ಈ ಸಂದರ್ಭದಲ್ಲಿ ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅದು ಏನೆಂದರೆ ಬೆಂಗಳೂರು ಟ್ರೇಡ್ ಅಸೋಸಿಯೇಷನ್ ಅವರು ಒಂದು ರೆಸಲ್ಯೂಷನ್ ಪಾಸು ಮಾಡಿದ್ದಾರೆ. ಅವರು ಏನು ಹೇಳುತ್ತಾರೆ ಎಂದರೆ ಈ ತರಹ ಅರ್ಬನ್ ಸೀಲಿಂಗ್ ಪ್ರಾಪರ್ಟಿ ಶಾಸನವನ್ನು ತೆಗೆದುಕೊಂಡು ಬಂದರೆ ಇದರಿಂದೆ ಕೈಗಾರಿಕೆಗಳು ಬೆಳೆಯುವುದಕ್ಕೆ ಅನಾನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಅದು ಹೇಗೆ ಎಂಬುದು ನನಗೆ ಅರ್ಥವಾಗಲಿಲ್ಲ. ಅವರು ಸರ್ಕಾರಕ್ಕೆ ಒಂದು ಮೆಮೊರಾಂಡಂ ಕೂಡ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಅದನ್ನು ನಾನು ಓದಿದ್ದೇನೆ. ಅವರು ಹೇಳುವುದೇನೆಂದರೆ ದೇಶದಲ್ಲಿ ಶ್ರೀಮಂತರು ಇದ್ದರೆ ಮಾತ್ರ ಕೈಗಾರಿಕೆಗಳು ಬರುವುದಕ್ಕೆ ಸಾಧ್ಯ ಅದ್ದರಿಂದ ಅರ್ಬನ್ ಸೀಲಿಂಗ್ ಪ್ರಾಪರ್ಟಿ ಹಾಕಿದರೆ ಕೈಗಾರಿಕೆಗಳನ್ನು ತೆಗೆದುಕೊಂಡು ಬರುವುದಕ್ಕೆ ಸಾಧ್ಯವಿಲ್ಲ ಅದ್ದರಿಂದ ನಗರಾಸ್ತಿಮಿತಿ ಹಾಕುವುದು ಸರಿಯಲ್ಲ ಎಂದು ಹೇಳಿದ್ದಾರೆ.

MADAM SPEAKER : The house will now adjourn to reassemble tomorrow at 9 A. M.

The house adjourned at five minutes past two of the Clock to to meet again at Nine of the Clock on Saturday, the 16th December 1972.

ANNEXURE

THE MYSORE APPROPRIATION (No. 3) BILL, 1972

(L. A. BILL No 35 OF 1972).

A Bill to authorise payment and apropriation of certain further sums from and out of the Consolidated Fund of the State for the services of the financial year 1972-73.

WHEREAS it is expedient to authorise payment and appropriation of certain further sums from and out of the Consolidated Fund of the State for the services of the financial year 1972—73;

BE it enacted by the Mysore State Legislature in the Twenty-third Year of the Republic of India as follows :—

1. **Short Title** — This Act may be called the Mysore Appropriation (No. 3) Act, 1972.

2. **Issue of rupees 37, 64, 83, 229 out of the Consolidated Fund of the State of Mysore for the financial year 1972-73** —

From and out of the Consolidated Fund of the State of Mysore. there may be paid and applied sums not exceeding those specified in column 3 of the Schedule amounting in the aggregate to the sum of thirty-seven crores, sixty-four lakhs, eighty three thousand, two hundred and twenty-nine rupees towards defraying the several charges which will come in course of payment during the financial year 1972-73 in respect of the services specified in caloum 2 of the Schedule.

3. **Appropriation** — The sums authorised to be paid and applied from and out of the Consolidated Fund of the State of Mysore by this Act shall be appropriated for the services and purposes expressed in the Schedule in relation to the said year.